# ವನ್ಯ

## ಹಸಿರು ಲೋಕದ ಕೌತುಕ

## ನವೆಂಬರ್ 2025



ಅಘನಾಶಿನಿ ನೇಚರ್ ಫೌಂಡೇಶನ್
ಜ್ಞಾನದ ಹರಿವು

# ಪರಿವಿಡಿ

# ವನ್ಯ

## ಹಸಿರು ಲೋಕದ ಕೌತುಕ


| ಕ್ರಮ ಸಂ | ಲೇಖನಗಳು | ಪುಟ ಸಂ |
| --- | --- | --- |
| | **ಕಾಡಿನ ಕತೆಗಳು** | |
| 1 | ಕಾಡಿನ ಶಿಲ್ಪಿಗಳು: ಏಷ್ಯನ್ ಆನೆಗಳ ಸಂರಕ್ಷಣೆಯ ಹಾದಿ ಸಂರಕ್ಷಣೆಯ ಅಗತ್ಯತೆ ಮತ್ತು ಭವಿಷ್ಯದ ದಾರಿ -ದಿವಾಕರ್ ಬಿ ಎಸ್ | 1 |
| 2 | ಸೌಮ್ಯ ಸ್ವಭಾವದ ನಿಶಾಚರಿ ‘ಕತ್ತುಪಟ್ಟಿ ಬೆಕ್ಕಿನ ಹಾವು’ - ಶಶಿಧರಸ್ವಾಮಿ ಆರ್. ಹಿರೇಮಠ | 5 |
| 3 | ಹಕ್ಕಿ ಗೂಡಿನ ಅಣಬೆಗಳು - ಗುಂಡಪ್ಪ ಎಸ್ | 8 |
| | **ಸಸ್ಯ ಲೋಕ** | |
| 4 | ಗ್ರೀಕ್ ದೇಶದ ಗಿಡಮೂಲಿಕೆ ತಾಯಿ ವೃತಗಳ ಅರ್ಚನೆಯ ಮಾಚಿಪತ್ರೆ -ಉಮಾಪತಿ ಭಟ್ಟ ಕೆ ವಿ | 9 |
| | **ಹಸಿರು ಹಾಡು** | |
| 5 | 'ಪಕ್ಷಿ ಗ್ರಾಮ'ದಲ್ಲಿ ಎಲ್ಲರಿಗೂ ಚಿರಪರಿಚಿತ - ರಾಜು ಕಿದೂರು | 12 |
| | **ಪ್ರಾಣಿ ಪ್ರಪಂಚದ ವಿಚಿತ್ರ ಪ್ರಭೇದಗಳು** | |
| 6 | ಕರ್ನಾಟದ ರಾಣೆಬೆನ್ನೂರಿನ ವಿಶೇಷವಾದ ಪ್ರಾಣಿ “ಭಾರತದ ಚಿಗರಿ” -ಶ್ರೀ.ನವೀನ ಪ್ಯಾಟಿಮನಿ | 15 |









**ಮುಖ್ಯ ಸಂಪಾದಕರು**
ಕೆ ಪಿ ಧನಂಜಯ್ ಕುಮಾರ್

**ಸಂಪಾದಕೀಯ ತಂಡ**
ವಿಗ್ನೇಶ್ ಆಗುಂಬೆ
ಶ್ರೀನಿಧಿ ರಾಮಚಂದ್ರ ನಾಯ್ಕ
ನಮಿತಾ ಸಿ ಕಾನಳ್ಳಿಮಠ
ನಯನ ಆರ್


ಮುಖಪುಟ: ಅಶೋಕ್ ಎನ್


ಲೇಖನ 01

# ಕಾಡಿನ ಶಿಲ್ಪಿಗಳು: ಏಷ್ಯನ್ ಆನೆಗಳ ಸಂರಕ್ಷಣೆಯ ಹಾದಿ ಸಂರಕ್ಷಣೆಯ ಅಗತ್ಯತೆ ಮತ್ತು ಭವಿಷ್ಯದ ದಾರಿ

## 1. ಪರಿಚಯ:

ಆನೆಗಳು ಭಾರತದ ಸಂಸ್ಕೃತಿ, ಧಾರ್ಮಿಕ ನಂಬಿಕೆಗಳು ಮತ್ತು ಪರಿಸರದ ಅವಿಭಾಜ್ಯ ಭಾಗ. “ಗಜ” ಎಂದರೆ ಬಲ, ಶಾಂತಿ ಮತ್ತು ಬುದ್ಧಿಯ ಸಂಕೇತ. ಪುರಾತನ ಗ್ರಂಥಗಳಿಂದಲೂ ಆನೆಗಳು ಗೌರವ ಮತ್ತು ದೈವತ್ವದ ಚಿಹ್ನೆಯಾಗಿ ಕಾಣಿಸಿಕೊಂಡಿವೆ. ಆದರೆ ಇತ್ತೀಚಿನ ದಶಕಗಳಲ್ಲಿ ಏಷ್ಯನ್ ಆನೆಗಳ ಸಂಖ್ಯೆ ಭಾರೀ ಪ್ರಮಾಣದಲ್ಲಿ ಇಳಿಕೆಯಾಗಿದೆ. ವಿಶ್ವ ವನ್ಯಜೀವಿ ನಿಧಿಯ (WWF) ಅಂದಾಜು ಪ್ರಕಾರ, ಕಳೆದ ಶತಮಾನದಲ್ಲಿ ಏಷ್ಯನ್ ಆನೆಗಳ ಜನಸಂಖ್ಯೆ ಶೇ. ೫೦ ಕ್ಕಿಂತ ಹೆಚ್ಚು ಕುಸಿದಿದೆ. ಕಳೆದ ಗಣತಿ (೨೦೨೫) ಪ್ರಕಾರ, ಭಾರತದಲ್ಲಿ ೨೨೪೪೬ ಆನೆಗಳಿವೆ. ಅವುಗಳಲ್ಲಿ ೨೫% ಕರ್ನಾಟಕದಲ್ಲಿವೆ.

ಆನೆಗಳು ಕೇವಲ ದೊಡ್ಡ ಪ್ರಾಣಿಗಳು ಅಲ್ಲ, ಅವು ಪರಿಸರದ ಶಿಲ್ಪಿಗಳು. ಅರಣ್ಯದಲ್ಲಿನ ಸಸ್ಯಾವರಣದ ಬೆಳವಣಿಗೆ, ನೀರಿನ ಸಂಗ್ರಹಣಾ ಪ್ರದೇಶಗಳ ರಕ್ಷಣೆ, ಹಾಗೂ ಅನೇಕ ಸಣ್ಣ ಪ್ರಾಣಿಗಳ ಬದುಕು ಆನೆಗಳ ಚಟುವಟಿಕೆಯಿಂದಲೇ ಅವಲಂಬಿತವಾಗಿದೆ. ಆನೆಗಳು ಬೀಜ ಹರಡುವುದರಿಂದ ಹೊಸ ಸಸ್ಯಾವರಣ ಹುಟ್ಟುತ್ತದೆ. ಜಲಮಾರ್ಗಗಳ ಮೂಲಕ ನೈಸರ್ಗಿಕ ನೀರಿನ ಹರಿವು ಸರಾಗವಾಗುತ್ತದೆ. ಹೀಗಾಗಿ ಆನೆಗಳ ಅಸ್ತಿತ್ವವು ಪರಿಸರದ ದೀರ್ಘಕಾಲಿಕ ಸಮತೋಲನದ ಮೂಲಸ್ತಂಭವಾಗಿದೆ.



ಚಿತ್ರ ಕೃಪೆ: :- ಸಿದ್ದು ಅರಕೆರೆ

ಆದರೆ ಮಾನವ ವಿಸ್ತರಣೆ, ಅರಣ್ಯ ನಾಶ, ಮತ್ತು ಅಕ್ರಮ ಬೇಟೆಗಳಿಂದ ಈ ಪ್ರಾಣಿಗಳು ಅಪಾಯದ ಅಂಚಿನಲ್ಲಿವೆ. ಆನೆಗಳ ಸಂರಕ್ಷಣೆ ಕೇವಲ ಜೀವಶಾಸ್ತ್ರದ ಕಾಳಜಿ ಅಲ್ಲ, ಅದು ಮಾನವಕುಲದ ನೈತಿಕ ಮತ್ತು ಪರಿಸರದ ಹೊಣೆಗಾರಿಕೆ ಕೂಡ ಆಗಿದೆ.

## 2. ಆನೆಗಳ ಪರಿಸರ ಪ್ರಾಮುಖ್ಯತೆ:

ಆನೆಗಳು ಕಾಡಿನ ಆರೋಗ್ಯವನ್ನು ಕಾಪಾಡುವ "ಕೀಸ್ಟೋನ್ ಸ್ಪೀಷೀಸ್" (Key stone species) ಎಂದು ಕರೆಯಲ್ಪಡುತ್ತವೆ. ಒಂದು ಕಾಡಿನ ಶಕ್ತಿ ಮತ್ತು ಉತ್ಪಾದಕತೆಯನ್ನು ಆನೆಗಳ ಉಪಸ್ಥಿತಿ ನಿರ್ಧರಿಸುತ್ತದೆ.

**ಆನೆಗಳು:**

- <u>ಬೀಜ ಹರಡುವ ನೈಸರ್ಗಿಕ ಏಜೆಂಟ್‌ಗಳು:</u> ಅವು ತಿನ್ನುವ ಹಣ್ಣುಗಳ ಬೀಜಗಳನ್ನು ದೂರದ ಸ್ಥಳಗಳಿಗೆ ಹರಡುತ್ತವೆ, ಇದರಿಂದ ಸಸ್ಯವೈವಿಧ್ಯತೆ ಹೆಚ್ಚುತ್ತದೆ.
- <u>ಜಲ ಸಂಪನ್ಮೂಲ ಸಂರಕ್ಷಕರು</u>: ಆನೆಗಳು ಅರಣ್ಯದಲ್ಲಿ ನೀರಿನ ಕಣಿವೆಗಳನ್ನು ತೋಡಿ, ಅನೇಕ ಪಕ್ಷಿಗಳು ಮತ್ತು ಪ್ರಾಣಿಗಳಿಗೆ ನೀರಿನ ಮೂಲ ಸೃಷ್ಟಿಸುತ್ತವೆ.
- <u>ಮಣ್ಣಿನ ಫಲವತ್ತತೆ</u> (Soil fertility) <u>ಹೆಚ್ಚಿಸುತ್ತವೆ</u>: ಅವುಗಳ ಮಲಮೂತ್ರದ ಮೂಲಕ ಸಸ್ಯಾವರಣಕ್ಕೆ ಅಗತ್ಯವಾದ ಪೋಷಕಾಂಶಗಳು ಮಣ್ಣಿಗೆ ಮರಳಿ ಸೇರುತ್ತವೆ.
- <u>ಜೀವವೈವಿಧ್ಯ</u> (biodiversity) <u>ಬೆಂಬಲಕರು</u>: ಆನೆಗಳ ಹಾದಿಯಲ್ಲಿನ ತೆರವಾದ ಜಾಗಗಳಲ್ಲಿ ಹೊಸ ಸಸ್ಯಾವರಣ ಬೆಳೆಯುತ್ತದೆ, ಇದು ಸಣ್ಣ ಪ್ರಾಣಿಗಳಿಗೆ ವಾಸಸ್ಥಳ ಒದಗಿಸುತ್ತದೆ.

ಹೀಗಾಗಿ ಆನೆಗಳು ಕೇವಲ ಒಂದು ಪ್ರಾಣಿ ಮಾತ್ರವಲ್ಲ, ಸಂಪೂರ್ಣ ಪರಿಸರ ವ್ಯವಸ್ಥೆಯ ಜೀವಂತ ಶಕ್ತಿ ಕೇಂದ್ರವಾಗಿವೆ.



ಚಿತ್ರ ಕೃಪೆ: :- ಸಿದ್ದು ಅರಕೆರೆ

**3. ಪ್ರಮುಖ ಸವಾಲುಗಳು:**

- <u>ಅರಣ್ಯ ನಾಶ:</u> ಅರಣ್ಯ ಪ್ರದೇಶಗಳನ್ನು ಕೃಷಿ, ರಸ್ತೆ ಮತ್ತು ಕೈಗಾರಿಕಾ ವಿಸ್ತರಣೆಗೆ ಬಳಸುವುದರಿಂದ ಆನೆಗಳ ವಾಸಸ್ಥಳ ಕಣ್ಮರೆಯಾಗುತ್ತಿದೆ.
- <u>ಮಾನವ-ಆನೆ ಸಂಘರ್ಷ:</u> ಆಹಾರ ಮತ್ತು ನೀರಿನ ಹುಡುಕಾಟದಲ್ಲಿ ಆನೆಗಳು ಗ್ರಾಮಗಳತ್ತ ಬರುವುದು, ಇದರಿಂದ ಬೆಳೆ ಹಾನಿ, ಆಸ್ತಿ ನಾಶ ಮತ್ತು ಕೆಲವೊಮ್ಮೆ ಸಾವುಗಳೂ ಸಂಭವಿಸುತ್ತವೆ.
- <u>ಅಕ್ರಮ ಬೇಟೆ ಮತ್ತು ದಂತ ವ್ಯಾಪಾರ</u>: ದಂತದ ಬೇಡಿಕೆ ಹೆಚ್ಚಿರುವುದರಿಂದ ಆನೆಗಳನ್ನು ಇನ್ನೂ ದೇಶದ ಕೆಲವು ಭಾಗಗಳಲ್ಲಿ ಬೇಟೆಯಾಡಲಾಗುತ್ತಿದೆ.
- <u>ವಲಸೆ ಮಾರ್ಗಗಳ ವ್ಯತ್ಯಯ:</u> ಹೊಸ ರಸ್ತೆ, ರೈಲುಮಾರ್ಗ ಮತ್ತು ಅಣೆಕಟ್ಟು ಯೋಜನೆಗಳು ಆನೆಗಳ ನೈಸರ್ಗಿಕ ಕಾರಿಡಾರ್‌ಗಳನ್ನು ಅಸ್ತವ್ಯಸ್ತಗೊಳಿಸುತ್ತಿವೆ.
- <u>ಹವಾಮಾನ ಬದಲಾವಣೆ:</u> ಉಷ್ಣಾಂಶ ಏರಿಕೆ ಮತ್ತು ಮಳೆಯ ಮಾದರಿಗಳ ಬದಲಾವಣೆ, ಆನೆಗಳ ಆಹಾರ ಮತ್ತು ನೀರಿನ ಲಭ್ಯತೆಯ ಮೇಲೆ ಪರಿಣಾಮ ಬೀರುತ್ತಿವೆ.



ಚಿತ್ರ ಕೃಪೆ: :- ಸಿದ್ದು ಅರಕೆರೆ

**4. ಸಂರಕ್ಷಣಾ ಕ್ರಮಗಳು:**

- ಸಂರಕ್ಷಿತ ವಲಯಗಳು: ಕರ್ನಾಟಕದ ಬಂಡೀಪುರ, ನಾಗರಹೊಳೆ, ದುಬ್ಬಾರೆ ಮತ್ತು ಕಾಳಿ ವನ್ಯಜೀವಿ ಅಭಯಾರಣ್ಯಗಳು ಆನೆ ಸಂರಕ್ಷಣೆಗೆ ಕೇಂದ್ರಗಳಾಗಿವೆ.
- ಎಲಿಫೆಂಟ್ ಕಾರಿಡಾರ್ ಯೋಜನೆ: ಆನೆಗಳ ವಲಸೆ ಮಾರ್ಗಗಳನ್ನು ಗುರುತಿಸಿ ಕಾನೂನುಬದ್ಧವಾಗಿ ಸಂರಕ್ಷಿಸುವ ಯೋಜನೆಗಳು ನಡೆಯುತ್ತಿವೆ.
- ತಂತ್ರಜ್ಞಾನ ಬಳಕೆ: ಜಿಪಿಎಸ್ ಕಾಲರ್, ಡ್ರೋನ್ ಮತ್ತು ಸೆನ್ಸರ್ ತಂತ್ರಜ್ಞಾನಗಳ ಮೂಲಕ ಆನೆಗಳ ಚಲನೆಯನ್ನು ನಿಗಾವಹಿಸಿ ಮಾನವ-ಆನೆ ಸಂಘರ್ಷ ಕಡಿಮೆ ಮಾಡಲಾಗುತ್ತಿದೆ.
- ಸಮುದಾಯ ಪಾಲ್ಗೊಳ್ಳಿಕೆ: ಗ್ರಾಮಸ್ಥರೊಂದಿಗೆ ಜಾಗೃತಿ ಶಿಬಿರಗಳು, ಸಂರಕ್ಷಣಾ ತರಬೇತಿ ಹಾಗೂ ಪರ್ಯಾಯ ಜೀವನೋಪಾಯ ಯೋಜನೆಗಳು ರೂಪಿಸಲ್ಪಡುತ್ತಿವೆ.
- ಕಾನೂನು ರಕ್ಷಣೆ: "ವೈಲ್ಡ್ ಲೈಫ್ ಪ್ರೊಟೆಕ್ಷನ್ ಆಕ್ಟ್, 1972" ಅಡಿಯಲ್ಲಿ ಆನೆಗಳನ್ನು ಸಂಪೂರ್ಣ ರಕ್ಷಿತ ಪ್ರಾಣಿಗಳ ಪಟ್ಟಿಗೆ ಸೇರಿಸಲಾಗಿದೆ.
- ಶಾಸ್ತ್ರೀಯ ಅಧ್ಯಯನ: ಆನೆಗಳ ಜನಸಂಖ್ಯೆ, ಆರೋಗ್ಯ ಮತ್ತು ವಲಸೆ ಪ್ಯಾಟರ್ನ್‌ಗಳ ಕುರಿತು ನಿರಂತರ ಸಂಶೋಧನೆ ನಡೆಯುತ್ತಿದೆ, ಇದು ನೀತಿ ರೂಪಿಸಲು ಸಹಕಾರಿಯಾಗಿದೆ.

**5. ಮುಂದಿನ ಪೀಳಿಗೆ ಭಾಗವಹಿಸುವ ಅಗತ್ಯ:**

ಆನೆ ಸಂರಕ್ಷಣೆಯ ಭವಿಷ್ಯ ಮುಂದಿನ ಪೀಳಿಗೆಯ ಕೈಯಲ್ಲಿದೆ. ಮಕ್ಕಳಲ್ಲಿ ಮತ್ತು ಯುವಕರಲ್ಲಿ ಪ್ರಕೃತಿ ಪ್ರೇಮ, ವನ್ಯಜೀವಿಗಳ ಬಗ್ಗೆ ಗೌರವ ಮತ್ತು ಪರಿಸರದ ಹೊಣೆಗಾರಿಕೆಯನ್ನು ಬೆಳೆಸುವುದು ಅತ್ಯವಶ್ಯಕ. ಶಾಲೆ ಹಾಗೂ ಕಾಲೇಜು ಪಠ್ಯಕ್ರಮಗಳಲ್ಲಿ ವನ್ಯಜೀವಿ ಶಿಕ್ಷಣವನ್ನು ಸೇರಿಸುವುದು, ಸ್ಥಳೀಯ ಯುವ ಸಂಘಟನೆಗಳ ಮೂಲಕ ಕಾಡು ಶಿಬಿರಗಳು ಮತ್ತು ಸಂರಕ್ಷಣಾ ಅಭಿಯಾನಗಳನ್ನು ಹಮ್ಮಿಕೊಳ್ಳುವುದು ಅಗತ್ಯ.

ಆನೆಗಳ ಕುರಿತಾದ ಕಥೆ, ಚಿತ್ರಕಲೆ, ಮತ್ತು ಪ್ರಬಂಧ ಸ್ಪರ್ಧೆಗಳು ಯುವ ಮನಸ್ಸಿನಲ್ಲಿ ಕಾಳಜಿಯ ಬೀಜ ಬಿತ್ತುತ್ತವೆ. ಇಂತಹ ಅರಿವಿನ ಯುವ ಪೀಳಿಗೆ ನಾಳೆಯ ನಿಜವಾದ ಸಂರಕ್ಷಣಾ ರಾಯಭಾರಿಗಳಾಗಿ ರೂಪುಗೊಳ್ಳಬಹುದು. ಅವರು ಕೇವಲ ಆನೆಗಳನ್ನೇ ಅಲ್ಲ, ಸಂಪೂರ್ಣ ಪರಿಸರದ ಪರ ಹೋರಾಡುವ ಶಕ್ತಿ ಆಗಬಹುದು.



ಚಿತ್ರ ಕೃಪೆ: :- ಸಿದ್ದು ಅರಕೆರೆ

**6. ಭವಿಷ್ಯದ ದೃಷ್ಟಿಕೋನ:**

ಆನೆಗಳ ಸಂರಕ್ಷಣೆ ಸರ್ಕಾರದಷ್ಟೇ ನಾಗರಿಕರ ಕರ್ತವ್ಯವೂ ಆಗಿದೆ. ಪರಿಸರ ಸ್ನೇಹಿ ಅಭಿವೃದ್ಧಿಯ ದಿಕ್ಕಿನಲ್ಲಿ ನೀತಿ ರೂಪಿಸಬೇಕು, ಅರಣ್ಯ ಸಂಪತ್ತನ್ನು ಗೌರವಿಸಬೇಕು ಮತ್ತು ಸಂರಕ್ಷಣಾ ಕಾರ್ಯಗಳಿಗೆ ಜನರ ಸಹಭಾಗಿತ್ವವನ್ನು ಉತ್ತೇಜಿಸಬೇಕು. ವಿಜ್ಞಾನ, ತಂತ್ರಜ್ಞಾನ ಹಾಗೂ ಸ್ಥಳೀಯ ಜ್ಞಾನವನ್ನು ಸಂಯೋಜಿಸಿದಾಗ ಮಾತ್ರ ಸಮಗ್ರ ಸಂರಕ್ಷಣೆ ಸಾಧ್ಯ. ಭವಿಷ್ಯದ ಪೀಳಿಗೆಗೆ ಪ್ರಕೃತಿಯ ಸಮೃದ್ಧಿ ಒದಗಿಸಲು ಇಂದು ಕೈಗೊಳ್ಳುವ ಕ್ರಮಗಳು ನಿರ್ಣಾಯಕವಾಗಿವೆ.

**ಸಾರಾಂಶ:**

ಆನೆಗಳು ಪ್ರಕೃತಿಯ ಶಕ್ತಿ, ಶಾಂತಿ ಮತ್ತು ಸಮತೋಲನದ ಸಂಕೇತ. ಅವುಗಳಿಲ್ಲದ ಕಾಡು ಜೀವಹೀನ, ಮತ್ತು ಅವುಗಳಿಲ್ಲದ ಪರಿಸರ ಸಮತೋಲನ ನಾಶವಾಗುತ್ತದೆ. "ಆನೆ ಉಳಿದರೆ ಕಾಡು ಉಳಿಯುತ್ತದೆ; ಕಾಡು ಉಳಿದರೆ ಜೀವನ ಉಳಿಯುತ್ತದೆ". ಈ ಸಂದೇಶವು ಕೇವಲ ಮಾತಲ್ಲ, ನಮ್ಮ ಪರಿಸರದ ಭವಿಷ್ಯಕ್ಕಾಗಿ ಮಾರ್ಗಸೂಚಿಯಾಗಿದೆ.

::::::::::::::::::::::::::::::::::::::::::::

**ದಿವಾಕರ್ ಬಿ ಎಸ್**
**ಅಧ್ಯಕ್ಷರು ಮತ್ತು ಸಂಸ್ಥಾಪಕರು**
**ಗಜ ಕನ್ಸರ್ವೇಶನ್ ಟ್ರಸ್ಟ್, ಬೆಂಗಳೂರು**
**ಇಮೇಲ್: conservegaja@gmail.com**

ಲೇಖನ 02

# ಸೌಮ್ಯ ಸ್ವಭಾವದ ನಿಶಾಚರಿ 'ಕತ್ತುಪಟ್ಟೆ ಬೆಕ್ಕಿನ ಹಾವು'

ರಾತ್ರಿ ಹತ್ತುವರೆ ಸಮಯ, ನಿಶಾಚರಿ ಮ್ಯಾಕ್ರೋ ಫೋಟೊಗ್ರಫಿಗಾಗಿ ಶಿರಸಿಯ ಮತ್ತಿಘಟ್ಟದಿಂದ ನಾನು, ಓಂಕಾರ ಪೈ, ವಿಪೀನ್ ಬಾಳಿಗ ಹಾಗೂ ಹೇಮಚಂದ್ರ ಜೈನ್ ಸೇರಿಕೊಂಡು ಕಾರಿನಲ್ಲಿ ಯಾಣದತ್ತ ಪ್ರಯಾಣ ಬೆಳೆಸಿದೇವು. ರಭಸವಾಗಿ ಸುರಿಯುವ ಮಳೆ. ರಸ್ತೆಯ ಇಕ್ಕೇಲಗಳಲ್ಲಿಯ ಮುಗಿಲೆತ್ತರದ ಮರಗಳ ಕಾಡು, ಮರದ ಎಲೆಗಳಿಂದ ತಟಗುಟ್ಟುವ ಮಳೆ ನೀರಹನಿ, ಮಲೆನಾಡಿನ ಕಾಡಿನ ಜೀವಿಗಳಿಗೆ ಈ ವರ್ಷಧಾರೆ ಹರುಷ ತಂದು ಜೀವಸಂಕುಲವು ಬಲು ಚಟುವಟಿಕೆಯಿಂದ ಕೂಡಿರುವ ಸಮಯವದು. ಬೀಸುವ ಗಾಳಿಯೊಂದಿಗೆ ಸುರಿಯುವ ಮಳೆಯ ರೌದ್ರಾವತಾರ ಕಂಡು ಕುವೆಂಪುರವರ

**ಕದ್ದಿಂಗಳು ಕಗ್ಗತ್ತಲು; ಕಾರ್ಗಾಲದ ರಾತ್ರಿ.**
**ಸಿಡಿಲ್ಮಿಂಚಿಗೆ ನಡುಗುತಿದೆ; ಪರ್ವತ ವನಧಾತ್ರಿ.**
**ತುದಿಯಿಲ್ಲದೆ ಮೊದಲಿಲ್ಲದೆ;**
**ಹಿಡಿದಂಬರವನು ತಬ್ಬಿದೆ**
**ಕಾಂದಬಿನಿ ರಾಶಿ; ನಿರ್ದಯ ಕಠಿಣಾಘಾತದಿ**
**ಕುಂಭಿನಿಯನು ಅಪ್ಪಳಿಸಿದೆ;**
**ಘೀಳಿಟ್ಟುರೆ ಭೋರೆನ್ನುತೆ**
**ಬಿರುಗಾಳಿಯು ಬೀಸಿ.**

ಕವನದ ಸಾಲುಗಳು ನೆನಪಾದವು. ಕಾರಿನ ವೈಪರ್ ಒಂದೇ ಸಮನೆ ಜೂರ್ರ್- ಜೂರ್ರ್ ಎಂದು ಅತ್ತ ಇತ್ತ ತಿರುಗಾಡುತ್ತ ಗ್ಲಾಸಿನ ಮೇಲಿನ ನೀರುನು ನೂಕಿ ಹಾದಿ ಕಾಣುವಂತೆ ಮಾಡುತ್ತಿತ್ತು. ಕಾರಿನ ಹೆಡ್ ಲೈಟ್‌ನಿಂದ ಸೂಸುವ ಬೆಳಕಿನಲ್ಲಿ ಓಂಕಾರ ಪೈಯವರ ಹದ್ದಿನ ಕಣ್ಣು ರಸ್ತೆ ಬದಿಯ ಜೀವಿಗಳನ್ನು ಹುಡುಕಾಡುತ್ತಿತ್ತು. ನಿಧಾನವಾಗಿ ಚಲಿಸುತ್ತಿದ್ದ ಕಾರನ್ನು ನಿಲ್ಲಿಸಲು ಹೇಮಚಂದ್ರರವರಿಗೆ ಹೇಳಿದರು.




ಚಿತ್ರ ಕೃಪೆ: ಶಶಿಧರಸ್ವಾಮಿ ಆರ್. ಹಿರೇಮಠ

ಕಾರು ನಿಂತ ಕೂಡಲೇ ತಡಮಾಡದೇ ಇಳಿದು ನಮ್ಮನ್ನು ಕೂಡ ಇಳಿದು ಬರಲು ಹೇಳಿದರು. ರಸ್ತೆ ಬದಿಯ ಒಣಗಿದ ಗಿಡದ ಮೇಲೆ ಕುಳಿತ ಬೆಕ್ಕಿನ ಕಣ್ಣಿನ ಹಾವು ಅವರ ಹದ್ದಿನ ಕಣ್ಣಿಗೆ ಬಿದ್ದಿದ್ದೆ ಆಶ್ಚರ್ಯ. ತಕ್ಷಣವೇ ನಾವು ಕಾರಿನಿಂದ ಇಳಿದು ಸಿದ್ದವಿದ್ದ ಕ್ಯಾಮರಾದಲ್ಲಿ ಆ ಬೆಕ್ಕು ಹಾವಿನ ಪೊಟೋಗ್ರಫಿ ಮಾಡತೊಡಗಿದೇವು. ಹೌದು ಅದು 'ಕತ್ತುಪಟ್ಟೆ ಬೆಕ್ಕಿನ' ಹಾವಾಗಿತ್ತು.

**ಕತ್ತುಪಟ್ಟೆ ಬೆಕ್ಕಿನ ಹಾವನ್ನು ಕೊರಳುಪಟ್ಟಿ ಬೆಕ್ಕಿನ ಹಾವು** ಎಂತಲೂ ಕರೆಯಲಾಗುತ್ತಿದೆ. ಇಂಗ್ಲೀಷನಲ್ಲಿ ಕಾಲಾರ್ಡ್ ಕ್ಯಾಟ್ ಸ್ನೇಕ್ (collared cat snake) ಎಂದು ಕರೆದು ವೈಜ್ಞಾನಿಕವಾಗಿ ಬೊಯಗ ನ್ಯೂಕ್ಯಾಲಿಸ್ (Boiga nuchalis) ಎಂದು ಹೆಸರಿಸಿ, ಸರೀಸೃಪಗಳ ರೆಪ್ಟಿಲಿಯಾ (Reptilia) ವರ್ಗದ, ಸ್ಕ್ವಾಮಾಟ (Squamata) ಗಣದ, ಉರಗಗಳ ಕೊಲುಬ್ರಿಡೇ (Colubridae) ಕುಟುಂಬಕ್ಕೆ ಸೇರಿಸಲಾಗಿದೆ.

**ದೊಡ್ಡ ಕಣ್ಣುಗಳ ಲಂಬ ಪಾಪೆಯ ಹಾವು:**

ಮಧ್ಯಮ ಗಾತ್ರದ ತೆಳು ಹಾಗೂ ನೀಳ ಶರೀರದ ಹಾವಾಗಿದ್ದು, ಪಾರ್ಶ್ವವು ಸಂಕುಚಿತವಾಗಿರುತ್ತದೆ. ಉದ್ದನೇಯ ತೆಳುವಾದ ಚೂಪಾದ ಕೊನೆಯಿರುವ ಬಾಲವಿದೆ. ತಲೆಯು ದೊಡ್ಡದಾಗಿ ತ್ರಿಕೋನಾಕೃತಿಯಲ್ಲಿದ್ದು, ಕುತ್ತಿಗೆಗಿಂತ ಅಗಲವಾಗಿದೆ. ದೇಹದ ಮೇಲ್ಭಾಗದ ಬಣ್ಣ ಕಂದು ಅಥವಾ ಹಳದಿ ಕಂದು ಬಣ್ಣದ್ದಾಗಿದ್ದು, ಮುಂಭಾಗ ಮತ್ತು ಮಧ್ಯದ ದೇಹದಲ್ಲಿ ಗಾಡವಾಗಿ ಎದ್ದು ಕಾಣುವ ವಿಶಿಷ್ಟವಾದ ಕೆಂಪು ಕಂದು ಬಣ್ಣದ ಪಟ್ಟಿಗಳನ್ನು ಹೊಂದಿದೆ. ಇದರ ಕೆಳಭಾಗವು ಹಳದಿ-ಬಿಳಿ ಮತ್ತು ಕಪ್ಪು ಚುಕ್ಕೆಗಳಿಂದ ಕೂಡಿದೆ.



ಚಿತ್ರ ಕೃಪೆ: ಶಶಿಧರಸ್ವಾಮಿ ಆರ್. ಹಿರೇಮಠ

ಈ ಹಾವಿಗೆ ಬೆಕ್ಕಿನ ಕಣ್ಣಿನಂತಿರುವ ಕಣ್ಣುಗಳು ದೊಡ್ಡವಾಗಿ ದೀರ್ಘವೃತ್ತಾಕಾರದ ಲಂಬವಾದ ಪಾಪೆಗಳನ್ನು ಹೊಂದಿದೆ. ಕತ್ತು ಅಥವಾ ಕೊರಳಿನಲ್ಲಿ ಒಂದು ವಿಶಿಷ್ಟವಾದ ಕಪ್ಪು ಪಟ್ಟಿಯಿದ್ದು, ಇದರಿಂದ ಈ ಹಾವಿಗೆ 'ಕತ್ತುಪಟ್ಟಿ ಬೆಕ್ಕಿನ ಹಾವು' ಎಂಬ ಹೆಸರು ಅನ್ವರ್ಥಕ. ಇವು ಹಿಂದವಡೆಯಲ್ಲಿ ಅಲ್ಪ ವಿಷವಿರುವ ಹಲ್ಲುಗಳನ್ನು ಹೊಂದಿದ್ದು, ವಿಷವನ್ನು ಚಿಕ್ಕ ಪುಟ್ಟ ಬೇಟೆಯಾಡಿದ ಜೀವಿಗಳನ್ನು ನಿಶ್ಚಲಗೊಳಿಸಲು ಉಪಯೋಗಿಸುತ್ತವೆ.

ಉದ್ದನೇಯ ಕಂದಾದ ಟಿಸುಳು ನಾಲಿಗೆ ಇದ್ದು ಇದನ್ನು ಆಗಾಗ ಹೊರಹಾಕಿ ತನ್ನ ಸುತ್ತ ಇರುವ ಪರಿಸರದ ಸೂಕ್ಷ್ಮತೆಗಳನ್ನು ಗ್ರಹಿಸಿಕೊಳ್ಳುತ್ತದೆ. ಈ ಹಾವು ಸುಮಾರು 120 ಸೆಂ.ಮೀ. ವರೆಗೆ ಬೆಳೆಯಬಲ್ಲದ್ದು. ಬೆನ್ನಿನ ಹುರುಪೆಗಳು ನಯವಾಗಿದ್ದು ಮಧ್ಯ ದೇಹದ ಸಾಲುಗಳಲ್ಲಿ ಓರೆಯಾಗಿ ಜೋಡಿಸಲ್ಪಟ್ಟಿವೆ.

**ಆಹಾರವಾಗಿ ಓತಿಗಳ ಬೇಟೆ:**

ಲಘು ವಿಷಕಾರಿ ಹಾವುಗಳಾದ ಇವು ಪ್ರಮುಖವಾಗಿ ಓತಿಗಳನ್ನು ಬೇಟೆಯಾಡಿ ತಿನ್ನುತ್ತವೆ. ಆದರೆ ಕೆಲಸಲ ಮರದ ಕಪ್ಪೆಗಳು ಮತ್ತು ಹಲ್ಲಿಗಳನ್ನು ಸಹ ಬೇಟೆಯಾಡಿ ತಿನ್ನುತ್ತವೆ.

**ಸೌಮ್ಯ ಸ್ವಭಾವದ ನಿಶಾಚರಿ ಉರಗ:**

ಇದೊಂದು ನಿಶಾಚರಿ ಹಾವಾಗಿದ್ದು, ಪಶ್ಚಿಮ ಘಟ್ಟ ಪ್ರದೇಶಕ್ಕೆ ಸೀಮಿತವಾಗಿ, ಮರಗಳಲ್ಲಿ ವಾಸಿಸುವ ಕಂದು ಬಣ್ಣದ ಹಾವು. ಇದು ತೇವಾಂಶವುಳ್ಳ ಬೆಟ್ಟದ ಅರಣ್ಯ ಪ್ರದೇಶಗಳ ಹಾಗೂ ಉಷ್ಣವಲಯದ ನಿತ್ಯಹರಿದ್ವರ್ಣ ಮತ್ತು ತೇವಾಂಶವುಳ್ಳ ಕಾಡುಗಳಲ್ಲಿ ಕಂಡುಬರುವ ಕಡಿಮೆ ಮತ್ತು ಮಧ್ಯಮ ಎತ್ತರದ ಗುಡ್ಡಗಾಡು ಪ್ರದೇಶಗಳಲ್ಲಿ ಕಾಣಸಿಗುತ್ತದೆ. ರಾತ್ರಿಯಲ್ಲಿ ಓಡಾಡುವ ಮತ್ತು ವೃಕ್ಷದ ಮೇಲೆ ಓಡಾಡುವ ಪ್ರಾಣಿಗಳ ಬೇಟೆಯನ್ನು ಹುಡುಕುತ್ತಾ ಅಲೆದಾಡುತ್ತದೆ. ಅಪರೂಪಕ್ಕೆ ಸಾಂದರ್ಭಿಕವಾಗಿ ನೆಲದ ಮೇಲೆ ಕಂಡುಬರುತ್ತದೆ. ಸಾಮಾನ್ಯವಾಗಿ ಸೌಮ್ಯ ಸ್ವಭಾವದ, ಆದರೆ ಸಮೀಪಿಸಿದಾಗ ಅಥವಾ ಕೈ ಹಾಕಿದಾಗ ಜೋರಾಗಿ ಹೊಡೆದು ಕಚ್ಚಲು ಎರಗುತ್ತದೆ. ಇದು ಕೆರಳಿದಾಗ ತನ್ನ ಮುಂಭಾಗದ ದೇಹವನ್ನು ಮೇಲಕ್ಕೆತ್ತಿ, ಕುಣಿಕೆಗಳಾಗಿ ಸುರುಳಿ ಸುತ್ತಿಕೊಂಡು, ಆಗಾಗ್ಗೆ ತನ್ನ ಬಾಲವನ್ನು ಕಂಪಿಸುತ್ತದೆ ಮತ್ತು ಸುಲಭವಾಗಿ ಕಚ್ಚುತ್ತದೆ.

ಪೊಟೋಗ್ರಾಫಿ ಮಾಡುವುದನ್ನು ಮುಂದುವರೆಸಿದೇವು. ರಾತ್ರಿಯಾಗಿದ್ದರಿಂದ ಪ್ಲಾಶ್ ಬಳಸಿ ಬೆಳಕನ್ನು ಸಾಪ್ಟ್ ಮಾಡಲು ಡಿಫ್ಯೂಸರ್ ಬಳಸಿ ಹಾವಿಗೆ ತೊಂದರೆಯಾಗದಂತೆ ವಿವಿಧ ಕೋನಗಳನ್ನು ಬದಲಿಸಿಕೊಂಡು ಪೊಟೋಗ್ರಫಿ ಮಾಡಿಕೊಂಡೆ. ಅದು ನಿಧಾನವಾಗಿ ಒಣಗಿದ ಮರದಿಂದ ಹತ್ತಿರದವಿದ್ದ ದೊಡ್ಡ ಮರದ ಕಾಂಡವನ್ನು ಬಳಸಿಕೊಂಡು ಮೇಲೆಕ್ಕೆ ಹತ್ತಿ ಎಲೆಗಳ ಮಧ್ಯದಲ್ಲಿ ಮರೆಯಾದಾಗ ನಾವು ಕಾರು ಹತ್ತಿ ಮತ್ತೊಂದು ನಿಶಾಚರಿಜೀವಿಯನ್ನು ಹುಡುಕಿಕೊಂಡು ಹೋರಟೆವು.



ಚಿತ್ರ ಕೃಪೆ: ಶಶಿಧರಸ್ವಾಮಿ ಆರ್. ಹಿರೇಮಠ

::::::::::::::::::::::::::::::::::::::::::::::

**ಶಶಿಧರಸ್ವಾಮಿ ಆರ್. ಹಿರೇಮಠ**
**ಕದರಮಂಡಲಗಿ, ಹಾವೇರಿ ಜಿಲ್ಲೆ**
**ಇಮೇಲ್: shashidhharswamyhiremath@gmail.com**

ಲೇಖನ 03

# ಹಕ್ಕಿ ಗೂಡಿನ ಅಣಬೆಗಳು

ಅದ್ಭುತ ಅಣಬೆ, ಮಳೆಗಾಲ ಆರಂಭ ಕಾಡು ಮತ್ತು ನಾಡಿನಲ್ಲಿ ಕೊಳೆತ ಪ್ರದೇಶ, ಒಣಗಿ ಬಿದ್ದಗಿಡ, ದಿಮ್ಮೆ, ಕಟ್ಟಿಗೆಗಳ ಮೇಲೆ ಕೊಳೆತಿನಿಗಳದೆ ಕಾರುಬಾರು. ಕೆಲವು ಜನ ಇದನ್ನು ನಾಯಿಕೊಡೆ. ಛೀಛೀ. ಹೊಲಸು ಅಂತಾ ಇವುಗಳಿಂದ ದೂರ ಸರಿಯುವುದೆ ಹೆಚ್ಚ ಆದ್ರೆ ಇವುಗಳ ಪರ್ಕೃತಿಯಲಿ ಇವಗಳ ಪಾತ್ರ ಬಹುಮುಖ್ಯ. ಈ ಶಿಲೀಂದ ಸಾಮ್ರಾಜ್ಯವು ಜೀವ ಸಾಮ್ರಾಜ್ಯದ 3ನೇ ದೊಡ್ಡ ಸಾಮ್ರಾಜ್ಯವಾಗಿದೆ. ವಿಶೇಷವಾಗಿ ಮಲೆನಾಡು, Western ghats & Eastern ghats ದಲ್ಲಿ ತಿನ್ನಲು-ತಿನ್ನಲು ಯೋಗ್ಯವಲ್ಲದ ಅನೇಕ ಅತಿ ಸುಂದರರೂಪ, ಚಿತ್ರವಿಚಿತ್ರ ಆಕಾರ, ಬಣ್ಣಬಣ್ಣದ ಅಣಬೆಗಳು ನೋಡಲು ಬಲುಚೆಂದ. ಅಂತಹ ಲೋಕದ ಅಣಬೆಗಳಲಿ ಈಗ ನಾನು ಹೇಳಲೂ ಹೊರಟ ಒಂದು ಎಂದೂ ಮರೆಯಲಾಗದ ಸವಿನೆನಪಿನ ಅತೀ ಚಿಕ್ಕ ಅಣಬಿ.

ಈ ಅಣಬೆಯನು (ಹಕ್ಕಿ-ಗೂಡಿನಅಣಬೆ) - Bird Nest Fungi. ಇದು Nudulariaceae ಡ (Cyathus striatus) . Nudulus -ಚಿಕ್ಕಗೂಡು ಅಂತ ಅರ್ಥ. ಈ ಅಣಬೆಗಳ ಆಕಾರವು ಹಕ್ಕಿಯ ಗೂಡಿನ ಹಾಗೆ ಇದು ಗೂಡಿನಲ್ಲಿ ಮೊಟ್ಟೆಗಳು ಇರುವ ರೀತಿ ಇರುತ್ತವೆ. ಇದು cup ಆಕಾರದಲ್ಲಿದು ಸಾಮಾನ್ಯವಾಗಿ 3-8 ಮೊಟ್ಟೆಗಳ ಆಕಾರದ ಬೀಜಕಗಳು, 4-18mm ಎತ್ತರ & 3-9mm ಅಗಲ ಇವುಗಳು 2cm ಗಿಂತಲು ಕಡಿಮೆ ದೇಹಹೊಂದಿವೆ. ದೇಹದ ಮೇಲ್ಭಾಗವು ಕೂದಲಿನ ಹಾಗೆ ಆವರಿಸಿಕೊಂಡಿವೆ ಮೊಟ್ಟೆ ರೀತಿಯ peridioles - ಮೊಟ್ಟೆಗಳು ಬೆಳೆದಿರುತ್ತವೆ. ಇವುಗಳು ಸಾಮನ್ಯವಾಗಿ ಅವರೆ ಕಾಳಿನ ಆಕಾರದಲಿದು (Lenticular shape)1-4mm ಗಾತ್ರ ಹೊಂದಿರುತ್ತವೆ.



ಚಿತ್ರ ಕೃಪೆ: ಧನಂಜಯ್ ಕುಮಾರ್

ಇವುಗಳು ಕಪ್ಪು,ಬಿಳಿ, ಕೆಂಪು ಮಿಶ್ರಿತ ಕಂದು ಬಣ್ಣಗಳಲ್ಲಿ ಇರುತವೆ. ಈ ಮೊಟ್ಟೆಗಳೇ ಬೀಜಕಗಳಾಗಿ ಕಾರ್ಯನಿರ್ವಹಿಸುತ್ತವೆ. ಇವುಗಳಲ್ಲಿ ಸಂತಾನೋತ್ಪತ್ತಿಯು ಲೈಂಗಿಕ & ಅಲೈಂಗಿಕವಾಗಿ ನಡೆಯುತ್ತದೆ. Peridioles ಗಳು ಮಳೆಯಿಂದ ಪ್ರಸರಣಗೊಂಡು ಮತ್ತೆ ಸೂಕ್ತವಾದ ವಾತವರಣದಲ್ಲಿ ಒಣಗಿದ ಕಟ್ಟಿಗೆ, ಸಣ್ಣ ಕಟ್ಟಿಗೆ ತುಂಡು, ಜೀವಂತ ಮರಗಳ ಕೊಳೆತ ಭಾಗಗಳಲ್ಲಿ ಕಾಣಸಿಗುತ್ತವೆ. ಇವುಗಳೂ ಸಾಮಾನ್ಯವಾಗಿ ಸಮಶೀತೋಷ್ಣವಲಯದ ಎಲ್ಲ ಭಾಗಗಳಲ್ಲಿಯೂ ಕಂಡು ಬರುತ್ತವೆ. ಇವಗಳ ಬೆಳವಣಿಗೆಗೆ ಸೂಕ್ತವಾದ ವಾತಾವರಣ ಮತ್ತು ಹೊರ ವಾತಾವರಣ ಉಷ್ಣ & ತೇವಾಂಶ ಯುಕ್ತ ಗಾಳಿ ಪಾತ್ರವಹಿಸುತ್ತವೆ. ಅಣಬೆಗಳು ಅಂತಿಮ ಕೊಳೆಸುವ ಜೀವಿಗಳಾಗಿ ಪರಿಸರದಲ್ಲಿ ಪ್ರಮುಖ ಪಾತ್ರವಹಿಸುತ್ತವೆ.

**ಗುಂಡಪ್ಪ ಎಸ್**
ಗಸ್ತು ಅರಣ್ಯಪಾಲಕ,
ಲೋಂಡಾ ವಲಯ, ಬೆಳಗಾವಿ ವಿಭಾಗ
ಇಮೇಲ್: gstalwar777@gmail.com

ಲೇಖನ 04

# ಗ್ರೀಕ್ ದೇಶದ ಗಿಡಮೂಲಿಕೆ ತಾಯಿ ವ್ರತಗಳ ಅರ್ಚನೆಯ ಮಾಚಿಪತ್ರೆ

"ಹಿತ್ತಲ ಗಿಡ ಮದ್ದಲ್ಲ " ನಾಡಿನಲ್ಲಿ ಅತ್ಯಂತ ಪ್ರಚಲಿತವಿರುವ ಗಾದೆಮಾತು. ಯಾವುದು ಸುಲಭವಾಗಿ ಸಿಗುತ್ತದೆಯೋ ಅಥವಾ ನಿಕಟವಾಗಿರುತ್ತದೆಯೋ ಅದರ ಮೌಲ್ಯ ಕಡಿಮೆಯಾಗಿ ಕಾಣುತ್ತದೆ. ಅಂತೆಯೇ ಯಾವುದು ಕಷ್ಟಪಟ್ಟು ಪಡೆಯಬೇಕೋ, ದೂರವಿರುತ್ತದೆಯೋ ಅದು ಶ್ರೇಷ್ಠವೆಂದು ನಮ್ಮ ಜಾಯಮಾನ ಎಂಬುದಕ್ಕೆ ಈ ಗಾದೆಮಾತು. ನಮ್ಮ ಪರಂಪರೆಯಲ್ಲಿ ಪ್ರಾಥಮಿಕ ಆರೋಗ್ಯವನ್ನು ಕಾಪಾಡಿಕೊಳ್ಳಲು ಹಿತ್ತಲಗಿಡದ ಮೇಲೆ ಹೆಚ್ಚಿನ ಅವಲಂಬನೆಯಿತ್ತು. ಪ್ರಕೃತಿಯ ಯಾವ ಮೂಲಿಕೆಯಲ್ಲಿ ಯಾವ ಔಷದಗುಣವಿದೆಯೆಂಬ ಅಮೂಲ್ಯ ಜ್ಞಾನವನ್ನು ಪಡೆದಿದ್ದ ಋಷಿಮುನಿಗಳು, ಸಾಧು ಸಂತರು, ಪಾರಂಪರಿಕ ವೈದ್ಯರು ನಿರಂತರವಾಗಿ ಉಳಿಸಿ ಬೆಳೆಸಿಕೊಂಡು ಬಂದಿದ್ದಾರೆ. ಪ್ರಕೃತಿಯು ನಮಗೆ ನೀಡಿರುವ ಅಮೂಲ್ಯ ಕೊಡುಗೆಗಳಲ್ಲಿ ಗಿಡಮೂಲಿಕೆಗಳು ಪ್ರಮುಖ ಸ್ಥಾನ ಪಡೆದಿವೆ. ಇಂತಹ ಹಲವು ಸಸ್ಯಗಳ ಸಾಲಿನಲ್ಲಿ ವಿಶಿಷ್ಟ ಸ್ಥಾನ ಪಡೆದಿರುವ ಮೂಲಿಕೆಯೇ ಮಾಚಿಪತ್ರೆ ಕೇವಲ ಅಲಂಕಾರಿಕ ಸಸ್ಯವಾಗಿರದೇ ಅನೇಕ ಆರೋಗ್ಯಕಾರಿ ಗುಣಗಳಿಂದ ಶತಮಾನಗಳಿಂದಲೂ ಜನಮನವನ್ನು ಗೆದ್ದ ಮನೆಮದ್ದಿನ ಗಿಡ. ನೋಡಲು ಸೇವಂತಿಗೆಯಂತೆ ಕಾಣುವ ಪುಟ್ಟ ಸಸ್ಯ ಆಯುರ್ವೇದಲ್ಲೂ, ಧಾರ್ಮಿಕ ಆಚರಣೆಯಲ್ಲೂ ಮಹತ್ವದ ಸ್ಥಾನ ಹೊಂದಿರುವ ಭೂಸ್ತರ ಸಸ್ಯ.



ಚಿತ್ರ ಕೃಪೆ: ಉಮಾಪತಿ ಭಟ್ಟ ಕೆ ವಿ

ವಿವಿಧ ವ್ರತಗಳ ಪತ್ರಪೂಜೆಯ ಪತ್ರವಾಗಿರುವ ಸಸ್ಯ ಮಲೆನಾಡಿನ ಜನರಲ್ಲಿ ಮಂಚಿಕುಡಿಯೆಂದು ಪ್ರಸಿದ್ದಿಯಾಗಿದೆ. ಗಿಡಮೂಲಿಕೆ ತಾಯಿ ಎಂದೇ ನಂಬಿರುವ ರೋಮನ್ ಸೈನಿಕರ ಆಯಾಸ ಕಳೆಯುವ ಪುಟಾಣಿ ಔಷಧಿಯ ಸಸ್ಯ ಮಾಚಿಪತ್ರೆ.

ಯೂರೋಪ ಉತ್ತರ ಆಫ್ರಿಕಾ, ಉತ್ತರ ಅಮೇರಿಕಾ ಭಾರತಕ್ಕೆ ಸ್ಥಳಿಯವಾಗಿರುವ ಮಂಚಿಪತ್ರೆಯು ಆಸ್ಟಿರೇಸಿ ಸಸ್ಯಕಟುಂಬದಲ್ಲಿ ಜನಿಸಿದೆ. ಆರ್ಟಿಮಿಸಿಯಾ ಪಲ್ಲೇನ್ಸ್ ಇದರ ವೈಜ್ಞಾನಿಕ ಹೆಸರು. ಆರ್ಟಿಮಿಸಿಯಾ ಗ್ರೀಕ್ ದೇಶದ ಕಾಡುಪ್ರಾಣಿ ಮತ್ತು ಮಹಿಳೆಯರ ಹೆರಿಗೆ ದೇವತೆ. ಅದಕೆ ಆರ್ಟಿಮಿಸಿಯಾ ಸೇರಿಕೊಂಡಿದೆ.

ಮಂಚಿಕುಡಿ, ಮಂಚಿಪತ್ರೆ ಎಂದು, ಹಿಂದಿಯಲ್ಲಿ ಮತ್ಸರೂ ಇಂಗ್ಲಿಷಿನಲ್ಲಿ ಇಂಡಿಯನ್ ಮಗ್ವರ್ಟ್, ಮರಾಠಿಯಲ್ಲಿ ಸುರಪೀಣ, ತಮಿಳಿನಲ್ಲಿ ಮಾಸಿಪಟ್ಟಿರಿ, ತೆಲುಗು ದವನಮು, ಗಂದೊತ್ತಟ, ತಪೋಧನ, ಪುಷ್ಪಚಾಮರ, ಬ್ರಹ್ಮಜಾತ, ತಪಸಪತ್ರ ಇವು ಸಂಸ್ಕೃತದ ನಾಮಾವಳಿಗಳು. ಯಾವ ಸಸ್ಯವು ಮನುಷ್ಯರ ಆರೋಗ್ಯಕ್ಕೆ ತುಂಬಾ ಉಪಯುಕ್ತವೋ, ಯಾವ ಸಸ್ಯ ನಿತ್ಯದ ಆಹಾರ ತಯಾರಿಕೆಗೆ ಯೋಗ್ಯವೋ ಅವೆಲ್ಲ ಸಸ್ಯಗಳನ್ನು ಧಾರ್ಮಿಕ ಆಚರಣೆಯಲ್ಲಿ ಬಳಕೆ ಮಾಡುವ ವಿಧಾನ ವನ್ನು ನಮ್ಮ ಪೂರ್ವಜರು ನಮಗೆ ತೋರಿಸಿಕೊಟ್ಟಿದ್ದಾರೆ. ಅದರಂತೆಯೇ ಮಾಚಿಪತ್ರೆ ಕೂಡಾ ದುರ್ಗಾ ಪೂಜಾ, ಸತ್ಯನಾರಾಯಣ ವ್ರತ, ಭೀಮನ ಅಮವಾಸ್ಯೆ ಸಿದ್ದಿ ವಿನಾಯಕ ವ್ರತ, ಶಿವಪೂಜಾ, ಅನಂತಚತುರ್ದಶಿ, ನಿರಶನಾರ್ಕವಾರವ್ರತ, ಶನಿ ಪ್ರದೋಷ ವ್ರತ, ಉಮಾಮಹೇಶ್ವರ ವ್ರತ, ಅನಂತ ಪದ್ಮನಾಭ ವ್ರತ, ಸ್ವರ್ಣಗೌರಿವ್ರತ, ವರಮಹಾಲಕ್ಷ್ಮೀ ವ್ರತ, ಸಂಕಷ್ಟ ಚತುರ್ಥಿ, ಕೇದಾರೇಶ್ವರ ವ್ರತ ಕಲ್ಪ, ವರದಶಂಕರ ವ್ರತ, ಸೋಮವತಿ ವ್ರತಗಳಲ್ಲಿ ಮಾಚಿಪತ್ರ ದಿಂದ ಅರ್ಚನೆ ಮಾಡುವ ಕ್ರಮವಿದೆ. ಗ್ರೀಕ್ ಪುರಾಣದಲ್ಲಿ ಆರ್ಟೆಮಿಸಿಯಾ ಎಂಬುದು ಅಲ್ಲಿನ ಕಾಡಿನ ಪ್ರಾಣಿಗಳ ಮತ್ತು ಹೆರಿಗೆಯ ದೇವತೆಯಾಗಿದೆ. ಈ ಸಸ್ಯವು ಮಹಿಳಾ ಸಂಬಂಧಿತ ಕಾಯಿಲೆಗಳನ್ನು ವಾಸಿ ಮಾಡುವುದರಿಂದ ಆರ್ಟೆಮಿಸಿಯಾ ದೇವಾಲಯದಲ್ಲಿ ಅವಳನ್ನು ಗೌರವಿಸಲು ಮತ್ತು ವಿವಿಧ ಆಚರಣೆಗಳಲ್ಲಿ ಮಾಚಿಪತ್ರೆಯನ್ನು ಬಳಕೆ ಮಾಡುತ್ತಾರೆ. ಮಕ್ಕಳ ರಕ್ಷಣೆಗೆ ತಾಯಿತವಾಗಿಯೂ ಉಪಯೋಗಿಸುತ್ತಾರೆ.ಒಳ್ಳೆಯ ಕನಸು ಬೀಳಲಿ ಎಂಬ ಕಾರಣಕ್ಕಾಗಿ ಒಣಗಿದ ಮಂಚಿಕುಡಿಯನ್ನು ಹಾಸಿಗೆಯ ದಿಂಬಿನ ಕೆಳಗೆ ಇಡುವದು ಮತ್ತು ಹೊಗೆಯನ್ನು ಸೇವನೆ ಮಾಡಲು ಬಳಸಲಾಗುತ್ತದೆ. ವಿಶೇಷವಾಗಿ ಸ್ತ್ರೀಯರ ಕಾಯಿಲೆಗಳ ಚಿಕಿತ್ಸೆಗೆ ಪವಿತ್ರ ಗಿಡಮೂಲಿಕೆಯಾಗಿರುವದರಿಂದ ಗಿಡಮೂಲಿಕೆಗಳ ತಾಯಿ" ಪರಿಗಣಿಸಿಲಾಗಿದೆ.

ಪ್ರಾಚೀನ ಕಾಲದಲ್ಲಿ ಆಯಾಸವನ್ನು ತಡೆಗಟ್ಟಲು ಮತ್ತು ವಿಷಕಾರಿ ಜೀವಿಗಳಿಂದ ಪ್ರಯಾಣಿಕರನ್ನು ರಕ್ಷಿಸಲು ಮಂಚಿಕುಡಿಯ ಚಿಗುರನ್ನು ಬೂಟಿನಲ್ಲಿ ಇಡಲಾಗುತ್ತಿತ್ತು. ಮಿಯಾನ ದ್ವೀಪದ ಸಾಂಕೇತಿಕ ಸಸ್ಯವಿದು. ಕಿರೀಟರೂಪದಲ್ಲಿ ನೇಯ್ದು ಬೇಸಿಗೆಯ ಆಚರಣೆಯಲ್ಲಿ ಬಳಸುತ್ತಿದ್ದರು.



ಚಿತ್ರ ಕೃಪೆ: ಉಮಾಪತಿ ಭಟ್ಟ ಕೆ ವಿ

ಸೇಂಟ್ ಜಾನ್ಸ್ ಈವ್ ನಲ್ಲಿ ದುಷ್ಟಶಕ್ತಿಗಳಿಂದ ರಕ್ಷಿಸಲು ಎಳೆಯ ಚಿಗುರನ್ನು ಧರಿಸಲಾಗುತ್ತಿತ್ತು ಮತ್ತು ಪ್ರಯಾಣಿಕರನ್ನು ಬಳಲಿಕೆ ಹಾಗೂ ಶಾಖದ ತೊಂದರೆಯಿಂದ ರಕ್ಷಿಸುತ್ತದೆ ಎಂಬ ನಂಬಿಕೆಯಿತ್ತು. ನೇಪಾಳದಲ್ಲಿ ಈ ಸಸ್ಯವನ್ನು ದೇವರುಗಳ ನೈವೇದ್ಯವಾಗಿ, ಪರಿಸರವನ್ನು ಶುದ್ದಿಕರಿಸಲು ದೂಪದ್ರವ್ಯವಾಗಿ ಬಳಸಲಾಗುತ್ತದೆ. ಚೀನಾ ಹಾಗೂ ಜಪಾನಿನಲ್ಲಿ ದುಷ್ಟ ಶಕ್ತಿಗಳನ್ನು ದೂರವಿಡಲು ಮನೆಯಬಾಗಿಲಿಗೆ ಸಸ್ಯವನ್ನು ನೇತುಹಾಕುವ ಪದ್ದತಿ ಪ್ರಾಚೀನದಲ್ಲಿತ್ತು.

ಆರ್ಟೆಮಿಸ್ ದೇವತೆಯ ಹೆಸರಿನಿಂದ ಕರೆಯಲ್ಪಡುವ ಮಂಚಿಕುಡಿ ಸಸ್ಯವು ಚಂದ್ರ ಚಕ್ರಗಳು. ಫಲವತ್ತತೆ, ಭವಿಷ್ಯ ಜ್ಞಾನ, ರಕ್ಷಣೆಯ ಪ್ರಾಚೀನ ಗ್ರೀಕ್ ತಿಳುವಳಿಕೆಗೆ ಅವಿಭಾಜ್ಯ ಅಂಗವಾಗಿತ್ತು. ರೋಮನ್ನರು ಈ ಸಸ್ಯವನ್ನು ಪೂಜಿಸುತ್ತಿದ್ದರು.

ಸೈನಿಕರು ಮತ್ತು ಪ್ರಯಾಣಿಕರು ಸುರಕ್ಷತೆಗಾಗಿ ಮತ್ತು ಆಯಾಸವನ್ನು ನಿವಾರಿಸಲು ತಮ್ಮ ಬೂಟುಗಳಲ್ಲಿ ಮಾಚಿ ಪತ್ರೆಯನ್ನು ಇಡುತ್ತಿದ್ದರು. ನೇಪಾಳದಲ್ಲಿ ಕೀಟನಾಶಕವಾಗಿ ಎಲೆಗಳ ಗೊಬ್ಬರವಾಗಿ ಬಳಸಲಾಗುತ್ತದೆ. ದೇಹದ ಮೇಲೆ ಮಂಚಿಕುಡಿ ರಸವನ್ನು ಹಚ್ಚಿದರೆ ಸೊಳ್ಳೆ ನಿವಾರಣೆಯಾಗಿ ಕಾರ್ಯ ಮಾಡುತ್ತದೆ. ಭೂತಬಾಧೆ, ಬಾಲಗ್ರಹ ನಿವಾರಣೆಗೆ ಉಪಯೋಗವಿದೆ.

ಕಾಂಡವು ಮೃದುವಾಗಿದ್ದು, ಬೇರಿನಿಂದ ಚಿಗುರಿ ಸುತ್ತಲೂ ಹರಡಿಕೊಂಡು ಎರಡರಿಂದ ಮೂರುಅಡಿ ಎತ್ತರವಾಗಿ. ತೇವಾಂಶ ಇರುವ ಕಡೆಗಳಲ್ಲಿ ಹುಲುಸಾಗಿ ಬೆಳೆಯುತ್ತದೆ. ಸೇವಂತಿಗೆ ಗಿಡದ ಎಲೆಯಂತೆ ಕಾಣುವದು. ಸಸಿಗಳನ್ನು ಸುಲಭವಾಗಿ ಬೆಳೆಸಬಹುದು. ಸಾಂಸ್ಕೃತಿಕ ಉಪಯೋಗದಷ್ಟೇ ಔಷಧಿಯವಾಗಿ ಬಳಕೆಯಿದೆ. ಒಂದು ವರ್ಷದ ಶಿಶುಗಳಿಗೆ ಮಲಬದ್ದತೆಯಾದರೆ ದಿನಕ್ಕೊಂದು ಸಾರೆ ಹತ್ತು ಮಂಚಿಪತ್ರೆಯ ಎಲೆಯನ್ನು ನೀರಿನಲ್ಲಿ ನಯವಾಗಿ ಅರೆದು ಸೋಸಿ ಅರ್ಧ ಚಮಚ ಕುಡಿಸಿದರೆ ನಿವಾರಣೆಯಾಗುತ್ತದೆ. ಹೊಟ್ಟೆಯುಬ್ಬರ, ಹೊಟ್ಟೆಯೊಳಗಿನ ಕ್ರಿಮಿರೋಗಕ್ಕೆ ಉತ್ತಮ ಔಷಧ. ಕರುಳುವ್ಯಾಧಿ, ಚರ್ಮರೋಗ, ಮೂಲವ್ಯಾಧಿ, ಉದರಶೂಲೆಗಳಿಗೆ ಮಂಚಿಕುಡಿಯಿಂದ ಮದ್ದು ತಯಾರಿಸುವರು. ಶೀತ ತಲೆನೋವುಗಳಲ್ಲಿ ಎಲೆಗಳನ್ನು ನೀರಿನಲ್ಲಿ ಅರೆದು ಬಿಸಿ ಮಾಡಿ ನೆತ್ತಿಗೆ ಹಾಗೂ ನೋವಿನ ಭಾಗಗಳಿಗೆ ಲೇಪನ ಒಂದುವರೆ ಗಂಟೆ ಬಿಟ್ಟು ಬಿಸಿ ನೀರಿನಲ್ಲಿ ತೊಳೆಯುವದು.

ಈ ಸಸ್ಯವು ಸಿನಿಯೋಲ್, ಥುಜೋನ್, ಥುಜಿಲ್ ಮತ್ತು ಸಿಟ್ರಲ್ ಎಂಬ ರಾಸಾಯನಿಕ ಘಟಕಗಳನ್ನು ಹೊಂದಿದೆ. ಎಲೆಗಳ ಪೇಸ್ಟ್ ಲೇಪನ ಮಾಡುವದರಿಂದ ಊತ ಗಾಯ ವಾಸಿಯಾಗುವದು. ಮಲಬದ್ದತೆ, ಪಿತ್ತ, ಮೂತ್ರಕೋಶದ ದೋಷ, ಚರ್ಮರೋಗ ಮೊದಲಾದ ಕಾಯಿಲೆಗಳನ್ನು ಗುಣ ಪಡಿಸುವ ಶಕ್ತಿ ಹೊಂದಿದೆ. ಶ್ರೀ ಗೋಪಾಲ ತೈಲ ಮಾಚಿತ್ರೆಯುಕ್ತ ಆಯುರ್ವೇದ ಔಷಧವಾಗಿದೆ.

ಮಂಚಿ ಪತ್ರ ಗಿಡವು ಕೇವಲ ನಮ್ಮ ತೋಟದ ಮೂಲೆಯಲ್ಲಿರುವ ಒಂದು ಸಾಮಾನ್ಯ ಸೊಪ್ಪಲ್ಲ. ಬದಲಿಗೆ ಆರೋಗ್ಯ ಮತ್ತು ಪೌಷ್ಟಿಕಾಂಶಗಳ ನಿಧಿಯಾಗಿದೆ. ಈ ಪುಟ್ಟ ಎಲೆಗಳಲ್ಲಿ ಅಡಗಿರುವ ಪ್ರಬಲವಾದ ಔಷಧಿಯ ಗುಣಗಳು ಮತ್ತು ಪ್ರತಿಕಾಯಗಳ ಶಕ್ತಿಯು ನಮ್ಮ ಪೂರ್ವಜರು ನಿಸರ್ಗದ ಬಗ್ಗೆ ಹೊಂದಿದ್ದ ಆಳವಾದ ಅರಿವಿಗೆ ಸಾಕ್ಷಿ. ಆಧುನಿಕ ಜಗತ್ತಿನಲ್ಲಿ ನಾವು ಸಂಕೀರ್ಣ ಆರೋಗ್ಯ ಸಮಸ್ಯೆಗಳಿಗೆ ರಾಸಾಯನಿಕ ಔಷಧಿಗಳನ್ನು ಆಶ್ರಯಿಸುವ ಬದಲು ನಮ್ಮ ಸುತ್ತಮುತ್ತಲಿನ ಪರಿಸರದಲ್ಲಿಯೇ ಲಭ್ಯವಿರುವ ಇಂತಹ ಅದ್ಭುತ ಸಂಪನ್ಮೂಲಗಳನ್ನು ಗುರುತಿಸಬೇಕು.ಆರೊಗ್ಯಕರ ಜೀವನದ ರಹಸ್ಯವು ಅಂತರಾಷ್ಟ್ರೀಯ ಮಾರುಕಟ್ಟೆಯಲ್ಲಿಲ್ಲ ಬದಲಿಗೆ ನಮ್ಮ ಸ್ಥಳೀಯ ಗಿಡಮೂಲಿಕೆಗಳಲ್ಲಿದೆ. ಈ ಅಮೂಲ್ಯ ಸಸ್ಯವನ್ನು ನಮ್ಮ ದಿನನಿತ್ಯ ಜೀವನದಲ್ಲಿ ಅಳವಡಿಸಿಕೊಳ್ಳುವ ಮೂಲಕ ನಾವು ಕೇವಲ ದೇಹವನ್ನು ಪೋಷಿಸುತ್ತಿಲ್ಲ ಪ್ರತಿಯಾಗಿ ಸಾವಿರಾರು ವರ್ಷಗಳ ನಮ್ಮ ಸಾಂಪ್ರದಾಯಿಕ ವೈದ್ಯಕೀಯ ಜ್ಞಾನವನ್ನು ಗೌರವಿಸುತ್ತಿದ್ದೇವೆ ಆರೋಗ್ಯಕರ ನಾಳೆಗಾಗಿ ಮನೆಯ ಅಂಗಳಲದಲಿ ಇಂದೇ ಮಾಚಿಪತ್ರೆ ಗಿಡವನ್ನು ಆರೋಪಣ ಮಾಡೋಣ. ನಮ್ಮ ನಾಡಿನ ವನಮೂಲಿಕೆ ಮಹತ್ವವನ್ನು ಜಗತ್ತಿಗೆ ಪರಿಚಯಿಸೋಣ.

**ಉಮಾಪತಿ ಭಟ್ಟ ಕೆ ವಿ**
ಅಧ್ಯಕ್ಷರು ಮತ್ತು ಪರಿಸರ ಕಾರ್ಯಕರ್ತರು
ಸಮಗ್ರ ವಿಕಾಸ ಟ್ರಸ್ಟ್, ಶಿರಸಿ

ಲೇಖನ 05

# 'ಪಕ್ಷಿ ಗ್ರಾಮ'ದಲ್ಲಿ ಎಲ್ಲರಿಗೂ ಚಿರಪರಿಚಿತ ಕೇಸರಿ ಕುತ್ತಿಗೆಯ ಹಸಿರು ಪಾರಿವಾಳ

ಅದು 2016ರ ನವೆಂಬರ್ ಹನ್ನೆರಡು. ಭಾರತದ ಪಕ್ಷಿ ಮಾನವರಾದ ಡಾ. ಸಲೀಂ ಆಲಿ ಅವರ ಜನ್ಮದಿನದಂದು ಮೊದಲ ಬಾರಿಗೆ ಕಿದೂರು ಗ್ರಾಮದಲ್ಲಿ ಪಕ್ಷಿ ನಿರೀಕ್ಷಣೆ ನಡೆದಿತ್ತು. ಒಣಗಿದ ಮುಳಿ ಹುಲ್ಲುಗಳೆಡೆಯಲ್ಲಿ ಪಾರೆಗಳಿಂದಾವೃತ ಪ್ರದೇಶದಲ್ಲಿ ನಡಿಗೆ ಆರಂಭವಾಗಿತ್ತು. ಪ್ರಾಕೃತಿಕ ಹಳ್ಳಗಳಿಂದ ಕೂಡಿದ, ಕಾಡು ಹಣ್ಣುಗಳಿಂದ ಸಮೃದ್ಧವಾಗಿದ್ದ, ಗದ್ದೆ, ಬಯಲು, ತೋಡು, ತೋಟ ಮತ್ತು ಶಿರಿಯ ನದಿಯಿಂದ ಶ್ರೀಮಂತವಾಗಿದ್ದ ಪ್ರದೇಶವದು. ಕ್ಯಾಮರಾ ಇಲ್ಲದ ಕೈಗಳಲ್ಲಿ ಹಳೆಯ ಮೋಡೆಲಿನ ಸಾಮಾನ್ಯ ದರ್ಜೆಯ ಬೈನಾಕ್ಯುಲರ್ ಮಾತ್ರವೇ ಜೊತೆಗಿತ್ತು.

ಒಂದೂಕಾಲು ಕಿಲೋ ಮೀಟರ್ ನಡಿಗೆ ಮುಗಿಸಿ ನಿರೀಕ್ಷಣೆ ಮುಂದುವರಿದಿತ್ತು. ಹೂ-ಹಣ್ಣುಗಳಿಲ್ಲದ ಅರ್ಧ ಒಣಗಿದ ಅಕೇಶಿಯಾ ಮರದಲ್ಲಿ ಎರಡು ಪಾರಿವಾಳಗಳು ಕಂಡು ಬರಲು ಬೈನಾಕ್ಯುಲರ್ ಅತ್ಯಂತ ಸೂಕ್ಷ್ಮವಾಗಿ ಗಮನಿಸಲು ಆರಂಭಿಸಿತು.

ನೋಡುವುದೇನು..? ಅಂತಹ ಸುಂದರ ಪಾರಿವಾಳಗಳು ಇಲ್ಲಿಯವರೆಗೂ ಕಾಸರಗೋಡು ಜಿಲ್ಲೆಯಲ್ಲಿ ಕಂಡುಬರಲಿಲ್ಲ. ದಟ್ಟಾರಣ್ಯಗಳಲ್ಲಿ ಹೆಚ್ಚಾಗಿ ಕಂಡುಬರುತ್ತವೆ ಎಂದು ಎಲ್ಲಿಯೋ ಓದಿದ ನೆನಪು ಬರಲಾರಂಭಿಸಿತು. ಹಸಿರು ಪಾರಿವಾಳವೊಂದರಿಂದ ಕೇಸರಿ ಕುತ್ತಿಗೆ ಹೊಳೆಯುತ್ತಿರುವುದನ್ನು ಕಂಡಾಗ ಎಲ್ಲಿಲ್ಲದ ಸಂತಸ ಮನೆ ಮಾಡಿತು.



**ಕೇಸರಿ ಕುತ್ತಿಗೆಯ ಹಸಿರು ಪಾರಿವಾಳದ ಜೋಡಿ...ಕಿದೂರು ಪಕ್ಷಿ ಗ್ರಾಮದಿಂದ...**
ಚಿತ್ರ ಕೃಪೆ: ರಾಜು ಕಿದೂರು

ಕೇಸರಿ ಕುತ್ತಿಗೆಯ ಹಸಿರು ಪಾರಿವಾಳ ವೈಜ್ಞಾನಿಕವಾಗಿ ಟ್ರೆರೊನ್ ಬಿಸಿಕ್ಟಸ್ ಎಂಬ ಹೆಸರಿನ ಬಾನಾಡಿಯನ್ನು ಗ್ರಾಮೀಣ ಪ್ರದೇಶದಲ್ಲಿ ನಿರೀಕ್ಷಣೆ ಮಾಡಿದ್ದು ವಿಶೇಷವೆನಿಸಿತು.

ಹೌದು, ಅತ್ಯಂತ ಅಪರೂಪವಾದ ಈ ದೃಶ್ಯವನ್ನು ಬಹಳ ಹತ್ತಿರದಿಂದ ಕ್ಯಾಮರಾ ಕಣ್ಣಲ್ಲಿ ಸೆರೆಹಿಡಿಯುವ ಸೌಭಾಗ್ಯ ನಮಗಿರಲಿಲ್ಲ. ತತ್ಪರಿಣಾಮವಾಗಿ ಹಕ್ಕಿಯ ಇರುವಿಕೆಯ ಸೀನರಿಯ ಪೆನ್ಸಿಲ್ ಡ್ರಾಯಿಂಗ್ ಒಂದು ಸಿದ್ಧವಾಯಿತು. ಹಕ್ಕಿಗಳ ನಿರೀಕ್ಷಣೆಯ ದಾಖಲಾತಿಗೆ ಮಾತ್ರವೇ ಸೀಮಿತವಾಗಿರುವ ಅಂತಾರಾಷ್ಟ್ರೀಯ ವೆಬ್ ಜಾಲ ಇ ಬರ್ಡ್ ನಲ್ಲಿ ಪಕ್ಷಿಯ ಡ್ರಾಯಿಂಗ್ ಸಹಿತ ಮಾಹಿತಿ ಅಪ್ಲೋಡ್ ಆಯಿತು.

ದಟ್ಟ ಕಾಡುವಾಸಿಯಾದ ಈ ಅಪರೂಪದ ಹಕ್ಕಿ ಗ್ರಾಮದಲ್ಲೂ ಕಂಡುಬರುತ್ತವೆ ಎಂಬುವುದು ಜಿಲ್ಲೆಯಲ್ಲಿ, ರಾಜ್ಯದಲ್ಲಿ ಪ್ರಚಾರವಾಗಲು ಬೇರೆ ಯಾವುದೇ ಮಾಧ್ಯಮದ ಸಹಾಯ ಬೇಕೆನಿಸಲಿಲ್ಲ. ಇ ಬರ್ಡ್ ಅಂಕಿ ಅಂಶವೇ ಮೌನ ಪ್ರಚಾರ ನೀಡಿತು.!

ಕೆಲವೇ ದಿನಗಳಲ್ಲಿ ಹಲವಾರು ಪ್ರಸಿಧ್ಧ ಕಂಪೆನಿಗಳ ಕ್ಯಾಮರಾ ಹೊಂದಿರುವ ಪಕ್ಷಿ ನಿರೀಕ್ಷಕರು ಕಿದೂರಿನಲ್ಲಿ ಬೀಡು ಬಿಟ್ಟರು.



ಸಾಮಾನ್ಯ ನಾಗರಿಕರಿಗೂ ಕೇಸರಿ ಕುತ್ತಿಗೆಯ ಹಸಿರು ಪಾರಿವಾಳಗಳನ್ನು ನೋಡುವುದೆಂದರೆ ಅದೇನೋ ಖುಷಿ..
ಚಿತ್ರ ಕೃಪೆ: ರಾಜು ಕಿದೂರು

ಬೆಳ್ಳಂ ಬೆಳಗ್ಗೆ ತಲುಪಿ, ಚಾ ತಿಂಡಿ ಊಟ ಸಿಗದ ಈ ಗ್ರಾಮದಲ್ಲಿ ಊರವರು ನೀಡಿದ ಫಲಹಾರವನ್ನು ಸ್ವೀಕರಿಸಿಕೊಂಡು ಹಲವು ಪಟಗಳನ್ನು, ವೀಡಿಯೋಗಳನ್ನು ಚಿತ್ರೀಕರಿಸಿಕೊಂಡರು. ವಿವಿಧ ಬರಹಗಳು ಮೂಡಿಬಂದವು.

ಕೇಸರಿ ಕುತ್ತಿಗೆಯ ಹಸಿರು ಪಾರಿವಾಳಗಳ ಇರುವಿಕೆ ರಾಜ್ಯ-ರಾಷ್ಟ್ರ ಮಟ್ಟದಲ್ಲಿ ಸುದ್ದಿಯಾಯಿತು.



**ಹಸಿರೆಲೆಗಳೆಡೆಯಲ್ಲಿ ಅವಿತು ಕೊಂಡರೆ ನಾನು ಅಷ್ಟು ಸುಲಭವಾಗಿ ಕಾಣಲಾರೆನು..**
ಚಿತ್ರ ಕೃಪೆ: ರಾಜು ಕಿದೂರು

ಇದುವೇ 2017ಕ್ಕೆ ಸಾಮಾನ್ಯ ನಾಗರಿಕರನ್ನು ಸೇರಿಸಿಕೊಂಡು ಕೇರಳದಲ್ಲಿ ಮೊತ್ತಮೊದಲಾಗಿ ಬರ್ಡ್ ಫೆಸ್ಟ್ ಒಂದನ್ನು ನಡೆಸಲು ಕಿದೂರು ಗ್ರಾಮ ಪ್ರೇರಣೆಯಾಯಿತು.

ಕೇಸರಿ ಕುತ್ತಿಗೆಯ ಹಸಿರು ಪಾರಿವಾಳಗಳು ವಲಸೆ ಹಕ್ಕಿಗಳಲ್ಲ. ಪಶ್ಚಿಮ ಘಟ್ಟ ಪ್ರದೇಶಗಳಲ್ಲಿ, ಈಶಾನ್ಯ ಭಾರತದ ವಿವಿದೆಡೆಗಳಲ್ಲಿ ಮಾತ್ರವಲ್ಲದೆ ಶ್ರೀಲಂಕಾ, ಇಂಡೋನೇಷ್ಯಾ, ಬಾಂಗ್ಲಾದೇಶ, ಮ್ಯಾನ್ಮಾರ್ ಗಳಲ್ಲಿ ವರ್ಷವಿಡೀ ಕಂಡುಬರುತ್ತವೆ.

ಕಾಡು ಹಣ್ಣುಗಳನ್ನು ಹೆಚ್ಚಾಗಿ ಇಷ್ಟಪಡುವುದರಿಂದಲೇ ಇವುಗಳು ಕಾಂಡಂಚಿನ ಗ್ರಾಮಗಳಲ್ಲಿ ಹೆಚ್ಚಾಗಿ ಕಂಡುಬರುತ್ತವೆ. ಹೊಟ್ಟೆ ತುಂಬಿದ ನಂತರ ಸೂರ್ಯನ ಬಿಸಿಲು ಸಿಗಲು ಎತ್ತರದ ಮರ-ಗಿಡಗಳಲ್ಲಿ ರೆಸ್ಟ್ ತೆಗೆದುಕೊಳ್ಳುತ್ತವೆ. ಈ ಕಾರಣದಿಂದಲೇ ಕಿದೂರು ಪಕ್ಷಿ ಗ್ರಾಮದಲ್ಲಿರುವ ಎಲ್ಲರೂ ಈ ವಿಶಿಷ್ಟ ಪಕ್ಷಿಯನ್ನು ಕಣ್ಣಾರೆ ಕಂಡುಕೊಳ್ಳುವ ಸೌಭಾಗ್ಯವನ್ನು ಪಡೆದಿದ್ದಾರೆ.

ಹೆಚ್ಚಾಗಿ ಮುಳ್ಳುಗಳಿಂದ ಕೂಡಿದ ಮರುವ ಮರ ಹಾಗೂ ಕನ್ವಟಿ ಎಂದು ಗ್ರಾಮೀಣರು ಹೇಳುವ ಮೃದು ಸಸ್ಯದ ಹಣ್ಣುಗಳನ್ನು ಇಷ್ಟಪಟ್ಟು ತಿನ್ನುವುದನ್ನು ಇಲ್ಲಿನ ನಾಗರಿಕರು ಗಮನಿಸಿ ಪಕ್ಷಿ ಮಿತ್ರರಿಗೆ ಹಕ್ಕಿಗಳ ಇರುವಿಕೆಯನ್ನು ಖಾತರಿ ಪಡಿಸುತ್ತಾರೆ.ಇದು ಇಲ್ಲಿಗೆ ಭೇಟಿ ನೀಡುವ ಹಲವಾರು ಪಕ್ಷಿ ನಿರೀಕ್ಷಕರಿಗೆ ಪ್ರಯೋಜನಕಾರಿಯಾಗಿದ್ದು ನಾಗರಿಕರೇ ಲೋಕಲ್ ಗೈಡ್ ಆಗಿರುವುದು ವಿಶೇಷವೆನಿಸಿದೆ.

**ಕೇಸರಿ ಕುತ್ತಿಗೆಯ ಹಸಿರು ಪಾರಿವಾಳಗಳು**

ಆಕಾರ ಮತ್ತು ಗಾತ್ರ ಸಾಮಾನ್ಯ ಪಾರಿವಾಳದ್ದು. ಹೆಣ್ಣು ಚಿಕ್ಕದು ಗಂಡು ಸ್ವಲ್ಪ ದೊಡ್ಡದು. ಶರೀರ ಪೂರ್ತಿ ಹಸಿರು. ಗಂಡಿನ ಕುತ್ತಿಗೆಯ ಭಾಗದಲ್ಲಿ ಕೇಸರಿ ಎದ್ದು ಕಾಣುವುದು. ಎಡೆಯಲ್ಲಿ ಪಿಂಕ್ ಸಹ ಕೇಸರಿಗೆ ಸಾಥ್ ನೀಡುವುದು. ಕಾಲುಗಳು, ಬೆರಳುಗಳು ಎಲ್ಲವೂ ಲೈಟ್ ಪಿಂಕು. ಇವುಗಳು ಕೇಸರಿ ಕುತ್ತಿಗೆಯ ಹಸಿರು ಪಾರಿವಾಳದ ಶಾರೀರಕ ವೈಶಿಷ್ಟ್ಯಗಳು.



**ಎತ್ತರದ ಮರದಲ್ಲಿ ಸೂರ್ಯನ ಬಿಸಿಲಿಗೆ ಮೈಯೊಡ್ಡಿ ಕುಳಿತುಕೊಂಡ ಜೋಡಿ ಹಕ್ಕಿಗಳು**.

ಚಿತ್ರ ಕೃಪೆ: ರಾಜು ಕಿದೂರು

ಈ ಪಾರಿವಾಳಗಳ ಜೊತೆಗೆ ಸಾಮಾನ್ಯ ಹಸಿರು ಪಾರಿವಾಳಗಳ ಗುಂಪೂ ಕಂಡು ಬರುವವು. ಅದರೆ ಕೇಸರಿ ಕುತ್ತಿಗೆಯನ್ನು ಕಂಡಕೂಡಲೇ ನಮಗೆ ಅದೇನೋ ಖುಷಿ ಪಡಬಹುದು. ಯಾಕೆಂದರೆ ಇದು ಎಲ್ಲಾ ಕಡೆಗಳಲ್ಲಿ ಕಣ್ಣಿಗೆ ಕಾಣಸಿಗುವುದು ಬಹಳ ಅಪರೂಪವೆಂಬುವುದನ್ನು ಒಪ್ಪಿಕೊಳ್ಳಲೇಬೇಕು.

**ರಾಜು ಕಿದೂರು**

**ಅಧ್ಯಾಪಕರು**

**ಹೋಲಿ ಫ್ಯಾಮಿಲಿ ಅನುದಾನಿತ ಶಾಲೆ,**

**ಕುಂಬಳೆ, ಕೇರಳ**

**ಇಮೇಲ್: rajukidoor@gmail.com**

ಲೇಖನ 06

# ಹಾರುವ ಕಪ್ಪೆ

ಸ್ನೇಹಿತರೇ ನೀವು ಜಿಗಿಯುವ ಕಪ್ಪೆ ಕೇಳಿದ್ದೀರಿ ಆದರೆ ಇಲ್ಲೊಂದು ಹಾರುವ ಕಪ್ಪೆ ಇದೆ.....! ಬನ್ನಿ ಈ ಹಾರುವ ಕಪ್ಪೆಯ ಬಗ್ಗೆ ವಿವರಣೆಯಾಗಿ ಹೇಳುತ್ತೇನೆ ಬನ್ನಿ....ಈ ಹಾರುವ ಕಪ್ಪೆಯ ಹೆಸರೇ ಮಲಬಾರಿನ ಹಾರುವ ಕಪ್ಪೆ (Malbar Flying Frog). 1870ರಲ್ಲಿ ಜರಡೋನ (Jerdon) ಎಂಬ ವಿಜ್ಞಾನಿಯು ಮಲಬಾರಿನ ಹಾರುವ ಕಪ್ಪೆ (Malbar Flying Frog) ಎಂದು ಈ ಕಪ್ಪೆಗೆ ನಾಮಕರಣ ಮಾಡಿದರು.

ಏಕೆಂದರೆ ಪಶ್ಚಿಮ ಘಟ್ಟದ ಬೆಟ್ಟಗುಡ್ಡಗಳ ಸಾಲುಗಳಲ್ಲಿ ಇವುಗಳು ಹೆಚ್ಚಾಗಿ ಕಂಡು ಬರುವುದರಿಂದ ಇದನ್ನು ಮಲಬಾರಿನ ಹಾರುವ ಕಪ್ಪೆ ಎಂದು ಹೆಸರಿಸಿದರು. ಈ ಕಪ್ಪೆಗೆ ಬಾಲವಿಲ್ಲದ ಕಾರಣ ವಿಜ್ಞಾನಿಗಳು ಈ ಕಪ್ಪೆಯನ್ನು (Anura) ವರ್ಗಕ್ಕೆ ಸೇರಿಸಿ ಹಾಗೂ ಮರವಾಸಿ ಇರುವುದರಿಂದ (Rachophoridae) ಕುಟುಂಬಕ್ಕೆ ಸೇರಿಸಿದ್ದಾರೆ.

ಈ ಕಪ್ಪೆಯು ಕೀಟಗಳಾದ ಸೊಳ್ಳೆಗಳನ್ನು, ಇರುವೆಗಳನ್ನು, ಜೀರುಂಡೆಗಳನ್ನು ಆಹಾರವಾಗಿ ತಿನ್ನುತ್ತದೆ. ಇದು 2 ರಿಂದ 10 ಸೆಂ.ಮೀ ಉದ್ದವಿದ್ದು 10-20ಗ್ರಾಂ ತೂಕವಿದೆ.

ಈ ಪ್ರಭೇದಗಳು ಪಶ್ಚಿಮ ಘಟ್ಟದ ಜಿಲ್ಲೆಗಳಾದ ಉತ್ತರಕನ್ನಡ, ಚಾಮರಾಜನಗರ, ಮೈಸೂರು, ಕೊಡಗು, ದಕ್ಷಿಣ ಕನ್ನಡ ಮತ್ತು ಹಾಸನ, ಶಿವಮೊಗ್ಗ ಜಿಲ್ಲೆಗಳಲ್ಲಿ ಕಂಡು ಬರುತ್ತವೆ.



ಚಿತ್ರ ಕೃಪೆ: ಧನಂಜಯ್ ಕುಮಾರ್

ಈ ಕಪ್ಪೆಯ ದೇಹದ ರಚಣೆ ಬಗ್ಗೆ ಹೇಳಬೇಕೇಂದರೆ ಹೊಟ್ಟೆಯ ಭಾಗ ಅಗಲವಿದ್ದು, ಉದ್ದನಾದ ಕಾಲು ಬೆರಳುಗಳ ನಡುವೆ ಜಾಲಪಾದಗಳು ಜೊತೆಯಾಗಿ ಜಾರಿಳಿಯುವ ವಿಧಾನವನ್ನು ರೂಢಿಸಿಕೊಂಡಿವೆ. ಹಾಗಾಗಿ ಇದರ ನೆರವಿನಿಂದ ಗಾಳಿಯಲ್ಲಿ ಜಾರಿ ಮರದ ರೆಂಬೆಗಳ ನಡುವೆ ಮರದಿಂದ ಮರಕ್ಕೆ ಸಾಮಾನ್ಯವಾಗಿ ಎತ್ತರ ಪ್ರದೇಶದಿಂದ ತಗ್ಗಾದ ಪ್ರದೇಶಕ್ಕೆ ಜಾರಿ ಚಲಿಸುತ್ತವೆ. ಇದುವೆ ಈ ಕಪ್ಪೆಯ ವಿಶೇಷವಾದ ಅದ್ಭುತ ವಿದ್ಯೆ. ಮರದಿಂದ ನೆಲಕ್ಕಿಳಿಯುವಾಗ ಸುಮಾರು 30-50 ಅಡಿಗಷ್ಟು ಹೆಚ್ಚು ದೂರ ಕ್ರಮಿಸಬಲ್ಲವು. ಹಾಗಾಗಿ ಇದನ್ನು ಮಲಬಾರಿನ ಹಾರುವ ಕಪ್ಪೆ ಎಂದು ಕರೆಯುತ್ತಾರೆ.

ಈ ಕಪ್ಪೆಯ ದೇಹ ಹಸಿರು ಮಿಶ್ರಿತ ಕಂದು ಬಣ್ಣವಿದೆ ಏಕೆಂದರೆ ಇವು ಯಾವಾಗಲೂ ಮರಗಿಡಗಳ ನಡುವೆ ವಾಸಿಸುತ್ತವೆ. ಹಾಗಾಗಿ ಶತ್ರುಗಳಿಂದ ಪಾರಾಗಲೂ ಈ ಬಣ್ಣವನ್ನು ಹೊಂದಿರುತ್ತವೆ. ಇನ್ನೊಂದು ವಿಶೇಷವೆನೆಂದರೆ ಈ ಹಸಿರು ಮಿಶ್ರಿತ ಕಂದು ಬಣ್ಣ ಇರುವುದರಿಂದ ಕಾಡುಗಳಲ್ಲಿ ಬಹಳ ಬೇಗ ಕಪ್ಪೆಗಳು ತಮ್ಮ ಜಾತಿಯ ಸಂಗಾತಿಗಳನ್ನು ಆಕರ್ಷಿಸುತ್ತವೆ.



ಚಿತ್ರ ಕೃಪೆ: ಧನಂಜಯ್ ಕುಮಾರ್

ಇವುಗಳ ಸಂತಾನೋತ್ಪತ್ತಿ ಬಗ್ಗೆ ಹೇಳಬೇಕೇಂದರೆ ಗಂಡು ಮತ್ತು ಹೆಣ್ಣು ಸಂಗಾತಿಗಳು ರಾತ್ರಿ ಬಹಳ ಚುರುಕುತನದಿಂದ ಕೆಲಸ ಮಾಡುತ್ತವೆ. ಉಳಿದೆಲ್ಲಾ ಕಪ್ಪೆಗಳಂತೆ ಈ ಕಪ್ಪೆಗಳು ಕೂಡ ಮಳೆಗಾಲದಲ್ಲಿ ಸಂತಾನೋತ್ಪತ್ತಿ ನಡೆಸುತ್ತೇವೆ. ಇವು ಮೂಲತಹ ಮರವಾಸಿ ಆದರೆ ಸಂತಾನೋತ್ಪತ್ತಿಗಾಗಿ ನೀರಿನ ಕಡೆಗೆ ಬರುತ್ತವೆ. ಗಂಡು ತನ್ನ ಹೆಣ್ಣು ಸಂಗಾತಿಯನ್ನು ಸೆಳೆಯಲು ಟ್ರಿ. ಟ್ರಿ. ಟ್ರಿ ಎಂದು ಕಾಲ್ ಮಾಡಿ ಕರೆಯುತ್ತದೆ. ಸಂಗಾತಿ ಹತ್ತಿರ ಬಂದ ಕೂಡಲೇ ಅವುಗಳ ಪ್ರಣಯಕ್ರಿಯೆ ಶುರುವಾಗುತ್ತದೆ.

ಹೆಣ್ಣು ಕಪ್ಪೆಯ ಗಾತ್ರ ಗಂಡಿಗಿಂತ ದೊಡ್ಡದು. ಹೆಣ್ಣು ಕಪ್ಪೆಯು ನಿಂತ ನೀರಿನ ಮೇಲೆ ಇರುವ ಮರ ಗಿಡಗಳ ಎಲೆಗಳನ್ನು ಆಯ್ಕೆ ಮಾಡಿ ತನ್ನ ಅಂಡನಾಳದಿಂದ ಮೊಟ್ಟೆಗಳನ್ನು ಬುರುಗಿನ ರೂಪದಲ್ಲಿ ಆಯ್ಕೆ ಮಾಡಿದ ಎಲೆಯ ಮೇಲೆ ಬಿಡುಗಡೆ ಮಾಡುತ್ತದೆ. ಅದೇ ಸಮಯದಲ್ಲಿ ಗಂಡು ತನ್ನ ವೀರ್ಯವನ್ನು ಬಿಡುಗಡೆ ಮಾಡುತ್ತದೆ ಅಮೇಲೆ ಹೆಣ್ಣು ಕಪ್ಪೆಯು ಬುರುಗನ್ನು ಎಲೆಯಿಂದ ಹೊದಿಸುತ್ತದೆ. ಹಾಗಾಗಿ ಅದನ್ನು ನಾವು ಬುರುಗಿನ ಗೂಡು ಎಂದು ಕರೆಯುತ್ತೆವೆ. ಆಮೇಲೆ ವೀರ್ಯ ಮೊಟ್ಟೆಗಳ ಜೊತೆ ಸೇರಿ ಫಲವತ್ತತೆಯನ್ನು ಹೊಂದಿ 6 ರಿಂದ 12 ವಾರಗಳ ಆದಮೇಲೆ ಮೀನಿನಂತೆ ಬಾಲವಿರುವ ಕಪ್ಪೆಯ ಗೊದಮೊಟ್ಟೆ (Tadpoles) ಮರಿಗಳು ಮೊಟ್ಟೆಯೊಡೆದು ಕೆಳಗಿನ ನೀರಿಗೆ ಬಿದ್ದು ನೀರಿನಲ್ಲಿ ಜೀವಿಸಿ (Metamorphosis) ರೂಪ ಪರಿವರ್ತನೆಗೊಳ್ಳುತ್ತದೆ.

ರೂಪ ಪರಿವರ್ತನೆ (Metamorphosis) ಎಂದರೆ ಕಪ್ಪೆಗಳು ಮೊದಲು ಹುಟ್ಟಿದಾಗ ಅವುಗಳಿಗೆ ಬಾಲವಿರತ್ತೆ ಮತ್ತು ಹೊಟ್ಟೆಯಲ್ಲಿ ಕರಳು ಕೂಡ ಉದ್ದವಾಗಿರುತ್ತೆ. ಆ ಸಮಯದಲ್ಲಿ ಕಪ್ಪೆಗಳ ಮರಿಗಳು ಸಸ್ಯಹಾರಿ ಪ್ರಾಣಿಯಾಗಿರುತ್ತವೆ. ಯಾವಾಗ ಮರಿಗಳು ಬೆಳೆಯುತ್ತಾ ದೊಡ್ಡ ಗಾತ್ರವಾಗುತ್ತವೆಯೋ ಆ ಸಮಯದಲ್ಲಿ ಕಪ್ಪೆಗಳ ದೇಹದಲ್ಲಿ ಹಿಂದಿನ ಕಾಲುಗಳು ಬೆಳೆಯುತ್ತವೆ. ಆ ಸಮಯದಲ್ಲಿ ಕಪ್ಪೆಗಳು ಬಾಲವನ್ನು ಹೆಚ್ಚು ಉಪಯೋಗಿಸುವುದಿಲ್ಲ. ಹಾಗಾಗಿ ಕಪ್ಪೆಗಳು ತಮ್ಮ ಬಾಲವನ್ನು ಕಳೆದುಕೊಳ್ಳುತ್ತವೆ. ಆಮೇಲೆ ಅವುಗಳು ಮಾಂಸಹಾರಿಯಾಗಿಯೂ ಪರಿವರ್ತನೆಯಾಗುತ್ತವೆ. ಕಪ್ಪೆಗಳು ನೀರಿನಲ್ಲಿ ಮತ್ತು ನೆಲದ ಮೇಲೆ ವಾಸಿಸುವುದರಿಂದ ಅವುಗಳನ್ನು ಉಭಯವಾಸಿ ಪ್ರಾಣಿಗಳು ಎಂದು ಕರೆಯುತ್ತಾರೆ.



ಚಿತ್ರ ಕೃಪೆ: ಧನಂಜಯ್ ಕುಮಾರ್

ಇವುಗಳ ಮತ್ತೊಂದು ವಿಶೇಷತೆ ಏನೆಂದರೆ ಇವು ಸಂದರ್ಭಕ್ಕೆ ತಕ್ಕಂತೆ ಊಸರವಳ್ಳಿಯ (Chameleon) ತರಹ ದೇಹದ ಬಣ್ಣವನ್ನು ಬದಲಾವಣೆ ಮಾಡುತ್ತವೆ. ಬಣ್ಣ ಬದಲಾವಣೆ ಮಾಡುವುದು ಅವುಗಳ ರಕ್ಷಣೆಯಗೊಸ್ಕರ. ಅವುಗಳ ದೇಹದ ಮೇಲ್ಭಾಗ ಹಸಿರಾಗಿದ್ದು ತೆಳಬಾಗ ತಿಳಿಹಳದಿ ಇದೆ ಹಾಗೂ ಜಾಲಪಾದಗಳು ಕಿತ್ತಳೆ ಕೆಂಪು ಬಣ್ಣದಂತೆ ಕಾಣುತ್ತವೆ. ಕಪ್ಪೆಗಳು ಜಾಲಪಾದಗಳನ್ನು ಉಪಯೋಗ ಮಾಡಿಕೊಂಡು ನೀರಿನಲ್ಲಿ ಈಜುತ್ತವೆ, ಮರಗಿಡಗಳ ಮೇಲೆ ಹತ್ತುತ್ತವೆ, ಹಾರುತ್ತವೆ.

ಈ ಕಪ್ಪೆಗಳ ದೇಹದ ಬಣ್ಣಗಳು ಆಕರ್ಷಕವಿರುವುದರಿಂದ ಛಾಯಾಗ್ರಾಹಕರು ಅವುಗಳನ್ನು ತಮ್ಮ ಕ್ಯಾಮಾರಾದಲ್ಲಿ ಸೇರೆ ಹಿಡಿಯಲು ಹುಡುಕುತ್ತಾ ಇರುತ್ತಾರೆ.



ಚಿತ್ರ ಕೃಪೆ: ಧನಂಜಯ್ ಕುಮಾರ್

ಇಡೀ ಭಾರತದಲ್ಲಿ ಈ ಜಾತಿಯ ಕಪ್ಪೆ ಪ್ರಬೇಧಗಳು 13 ಇವೆಯಂತೆ. ಅದರಲ್ಲಿ ಹಾರುವ ಕಪ್ಪೆಯನ್ನು ಸೇರಿಸಿ 4 ಪ್ರಬೇಧಗಳು ಭಾರತದ ಪಶ್ಚಿಮ ಘಟ್ಟಗಳ ಸಾಲುಗಳಲ್ಲಿ ಇವೆ. ಅವುಗಳ ಹೆಸರು:

1) Rhacophorus pseudomalabaricus
2) Rhacophorus lateralis
3) Rhacophorus calcadensis.

::::::::::::::::::::::::::::::::::::::::::::::::

**ಶ್ರೀ ನವೀನ ಪ್ಯಾಟಿಮನಿ**
**ಟ್ಯಾಕ್ಸಿಡರ್ಮಿಸ್ಟ**
**ಪ್ರಾದೇಶಿಕ ಪ್ರಾಕೃತಿಕ ನೈಸರ್ಗಿಕ ಇತಿಹಾಸ ವಸ್ತುಸಂಗ್ರಹಾಲಯ, ಮೈಸೂರು.**
**ಇಮೇಲ್:-naveenpyatimani9901@gmail.com**

# ಅಂಕಣಕಾರರು



**ಉಮಾಪತಿ ಕೆ.ವಿ.** ವನ್ಯ ಮಾಸಪತ್ರಿಕೆಯ "**ಹಸಿರು ಲೋಕ**" ಅಂಕಣದ ಬರಹಗಾರರಾದ ಇವರು "ಸಮಗ್ರ ಅಭಿವೃದ್ಧಿ ಟ್ರಸ್ಟ್" ಸಂಸ್ಥಾಪಕರಾಗಿದ್ದು, ಮೂರು ದಶಕಗಳಿಂದ ಪರಿಸರ ಮತ್ತು ಸಮಾಜಮುಖಿ ಕಾರ್ಯಗಳಲ್ಲಿ ತೊಡಗಿಸಿಕೊಂಡಿದ್ದಾರೆ. ಗ್ರಾಮೀಣ ಪ್ರದೇಶಗಳಲ್ಲಿ ಶಿಬಿರಗಳು, ಕಾರ್ಯಾಗಾರಗಳು ಹಾಗೂ ವನಮಹೋತ್ಸವಗಳನ್ನು ಆಯೋಜಿಸಿ ಸಾವಿರಾರು ಜನರಿಗೆ ಪರಿಸರ ಜಾಗೃತಿ ಮೂಡಿಸಿದ್ದಾರೆ. ಅವರ ನೇತೃತ್ವದಲ್ಲಿ 10,000 ಕ್ಕೂ ಹೆಚ್ಚು ಗಿಡಗಳನ್ನು ನೆಡುವ ಮೂಲಕ ಹಸಿರು ವಾತಾವರಣವನ್ನು ನಿರ್ಮಿಸುವ ಕಾರ್ಯ ನಡೆಯಿತು. ಸಾಹಿತ್ಯ ಕ್ಷೇತ್ರದಲ್ಲಿಯೂ ಅವರು ಹೆಸರಾಗಿದ್ದು, ಅನೇಕ ಕೃತಿಗಳ ಮೂಲಕ ಸಮಾಜಮುಖಿ ಸಂದೇಶವನ್ನು ಹರಡಿದ್ದಾರೆ. 2017 ಮತ್ತು 2019 ರಲ್ಲಿ ರಾಜ್ಯ ಮಟ್ಟದ ಪರಿಸರ ಪ್ರಶಸ್ತಿಗಳನ್ನು ಪಡೆದು ತಮ್ಮ ಸೇವೆಗೆ ಮಾನ್ಯತೆ ಪಡೆದಿದ್ದಾರೆ. ಅವರ ಸೇವೆಗಳು ಪರಿಸರ ಸಂರಕ್ಷಣೆಯ ಜೊತೆಗೆ ಸಾಮಾಜಿಕ ಬದಲಾವಣೆಗೂ ಪ್ರೇರಕವಾಗಿವೆ. ಪ್ರಕೃತಿ ಸಂರಕ್ಷಣೆ ಹಾಗೂ ಹಸಿರು ಭವಿಷ್ಯದ ನಿರ್ಮಾಣವೇ ಇವರ ಜೀವನದ ಧ್ಯೇಯವಾಗಿದೆ.



**ರಾಜು ಕಿದೂರು,** ವನ್ಯ ಮಾಸಪತ್ರಿಕೆಯ "**ಹಸಿರು ಹಾಡು**" ಅಂಕಣದ ಬರಹಗಾರರಾದ ಇವರು ಕೇರಳದ ಕಾಸರಗೋಡಿನ ಕುಂಬಳೆ ಹೋಲಿ ಫ್ಯಾಮಿಲಿ ಶಾಲೆಯ ಕನ್ನಡ ಅಧ್ಯಾಪಕ, ಪಕ್ಷಿ ನಿರೀಕ್ಷಕ ಮತ್ತು ಹವ್ಯಾಸಿ ಬರಹಗಾರ. ಕೇರಳ ಅರಣ್ಯ ಇಲಾಖೆಯ ಅಧಿಕೃತ ಹಾವು ಸಂರಕ್ಷಕರಾಗಿದ್ದಾರೆ. ಸ್ಥಳೀಯ ಗಿಡಗಳನ್ನು ನೆಟ್ಟು ಪೋಷಿಸುವ ಜೊತೆಗೆ ಕಪ್ಪೆ, ದುಂಬಿ, ಚಿಟ್ಟೆ ಹಾಗೂ ಪತಂಗಗಳ ಅಧ್ಯಯನದಲ್ಲಿ ತೊಡಗಿಸಿಕೊಂಡಿದ್ದಾರೆ. ಹಲವಾರು ಪರಿಸರ ಅಧ್ಯಯನ ಶಿಬಿರಗಳಲ್ಲಿ ಮುಂದಾಳತ್ವ ವಹಿಸಿದ್ದಾರೆ. ಷಟ್ಪಥ ಹೈವೇ ಕಾಮಗಾರಿಯ ಸಂದರ್ಭದಲ್ಲಿ ಜಲಪಕ್ಷಿಗಳ ಆವಾಸ ಸಂರಕ್ಷಣೆಗಾಗಿ ನೇತೃತ್ವ ನೀಡಿದ್ದಾರೆ. ತಮ್ಮ ಹುಟ್ಟೂರು ಕಿದೂರನ್ನು ಭಾರತದ ಮೊದಲ ಪಕ್ಷಿ ಗ್ರಾಮವನ್ನಾಗಿಸಿದ ಸಾಧನೆ ಇವರ ಬಳಗಕ್ಕೆ ಸಲ್ಲುತ್ತದೆ. ಕನ್ನಡ ಹಾಗೂ ಕೊಂಕಣಿ ಪತ್ರಿಕೆಗಳಲ್ಲಿ ಅಂಕಣ ಬರಹಗಾರರು, ಹಲವು ವಿಜ್ಞಾನ ಲೇಖನಗಳು ರಾಷ್ಟ್ರೀಯ-ಅಂತಾರಾಷ್ಟ್ರೀಯ ಪತ್ರಿಕೆಗಳಲ್ಲಿ ಪ್ರಕಟವಾಗಿವೆ. ಗಡಿನಾಡು ರಾಜ್ಯೋತ್ಸವ ಪ್ರಶಸ್ತಿ, ಹಸಿರು ಶಿಕ್ಷಕ ಪ್ರಶಸ್ತಿ ಸೇರಿದಂತೆ ಅನೇಕ ಗೌರವಕ್ಕೆ ಪಾತ್ರರಾಗಿದ್ದಾರೆ.



**ಶ್ರೀ.ನವೀನ ಪ್ಯಾಟಿಮನಿ,** ವನ್ಯ ಮಾಸಪತ್ರಿಕೆಯ "**ಪ್ರಾಣಿ ಪ್ರಪಂಚದ ವಿಚಿತ್ರ ಪ್ರಭೇದಗಳು**" ಅಂಕಣದ ಬರಹಗಾರರಾದ ಇವರು ಮೈಸೂರಿನ ಪ್ರಾದೇಶಿಕ ಪ್ರಾಕೃತಿಕ ಇತಿಹಾಸ ವಸ್ತುಸಂಗ್ರಹಾಲಯದಲ್ಲಿ ಟ್ಯಾಕ್ಸಿಡರ್ಮಿಸ್ಟ್ ಆಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಈ ವಸ್ತುಸಂಗ್ರಹಾಲಯವು ರಾಷ್ಟ್ರೀಯ ಪ್ರಾಕೃತಿಕ ಇತಿಹಾಸ ವಸ್ತುಸಂಗ್ರಹಾಲಯ ಹಾಗೂ ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಸಚಿವಾಲಯದ ಅಡಿಯಲ್ಲಿ ಕಾರ್ಯನಿರ್ವಹಿಸುತ್ತದೆ. ಕರ್ನಾಟಕ ವಿಶ್ವವಿದ್ಯಾಲಯದಿಂದ ಸ್ನಾತಕೋತ್ತರ ಪದವಿ ಪಡೆದ ಬಳಿಕ, ಧಾರವಾಡದ ಕರ್ನಾಟಕ ವಿಜ್ಞಾನ ಮಹಾವಿದ್ಯಾಲಯದ ಪ್ರಾಣಿಶಾಸ್ತ್ರ ವಸ್ತುಸಂಗ್ರಹಾಲಯದಲ್ಲಿ ಸೇವೆ ಸಲ್ಲಿಸಿದ್ದಾರೆ. ಅಲ್ಲಿ 2,500 ಕ್ಕೂ ಹೆಚ್ಚು ಪ್ರಾಣಿ ಮಾದರಿಗಳನ್ನು ಸಂರಕ್ಷಿಸಿ, ಸಾರ್ವಜನಿಕರಲ್ಲಿ ಸಂರಕ್ಷಣೆಯ ಅರಿವು ಮೂಡಿಸಿದರು. ವಿಜ್ಞಾನ ಲೋಕ ಸೇರಿದಂತೆ ಅನೇಕ ಪತ್ರಿಕೆಗಳಲ್ಲಿ 40 ಕ್ಕೂ ಹೆಚ್ಚು ವೈಜ್ಞಾನಿಕ ಲೇಖನಗಳನ್ನು ಪ್ರಕಟಿಸಿದ್ದಾರೆ. ಪ್ರಸ್ತುತ, ದೇಶದ ಐದು ಪ್ರಮುಖ ಪ್ರಾದೇಶಿಕ ಮ್ಯೂಸಿಯಂಗಳಲ್ಲಿ ಒಂದಾದ ಮೈಸೂರು ಮ್ಯೂಸಿಯಂನಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ಭಾರತದಲ್ಲಿ ಬೆರಳಣಿಕೆಯಷ್ಟು ಟ್ಯಾಕ್ಸಿಡರ್ಮಿಸ್ಟರಲ್ಲಿ ಒಬ್ಬರಾಗಿರುವ ಇವರೇ ಕರ್ನಾಟಕದ ಏಕೈಕ ಟ್ಯಾಕ್ಸಿಡರ್ಮಿಸ್ಟ್.

# ವನ್ಯ

ಹಸಿರು ಲೋಕದ ಕೌತುಕ

# ನೀವು ವನ್ಯಕ್ಕೆ ಬರಿಯಬಹುದು

**“ವನ್ಯ"**
ಅಘನಾಶಿನಿ ನೇಚರ್ ಫೌಂಡೇಶನ್ ಪ್ರಸ್ತುತಪಡಿಸುವ ಪ್ರಕೃತಿ, ಅರಣ್ಯ, ವನ್ಯಜೀವಿ ಮತ್ತು ಜೀವ ವೈವಿಧ್ಯತೆಗೆ ಸಂಬಂಧಪಟ್ಟ ಕನ್ನಡದ ಆನ್ಲೈನ್ ಮಾಸ ಪತ್ರಿಕೆ.

ನಿಮ್ಮ ಅನುಭವ, ಲೇಖನ, ಕಥನ, ಸಂಶೋಧನಾ ಟಿಪ್ಪಣಿ ಅಥವಾ ಪ್ರಕೃತಿ ದಿನಚರಿಗೆ ಇಲ್ಲಿ ಸದಾ ಸ್ವಾಗತ.

ಪ್ರಕೃತಿಯ ಬಗ್ಗೆ ನಿಮ್ಮ ಪ್ರೀತಿ ಮತ್ತು ಜ್ಞಾನವನ್ನು ಇನ್ನಷ್ಟು ಜನರೊಂದಿಗೆ ಹಂಚಿಕೊಳ್ಳಲು ಇದು ಒಂದು ವೇದಿಕೆ.

- ಲೇಖನವು **ಕನ್ನಡದಲ್ಲಿ** ಇರಬೇಕು.
- ಗರಿಷ್ಠ 2-3 ಪುಟಗಳಿಗೆ ಮೀರದಂತೆ ಲೇಖನವನ್ನು ಬರೆಯಿರಿ.
- ಲೇಖನವನ್ನು **PDF** ಅಥವಾ **Word** ಸ್ವರೂಪದಲ್ಲಿ ಕಳುಹಿಸಿರಿ.
- ಕಳುಹಿಸಬೇಕಾದ ವಿಳಾಸ: **aghanaashini24@gmail.com**

ಈ ಮಾಸಪತ್ರಿಕೆಯಲ್ಲಿ ಪ್ರಕಟವಾಗುವ ಪ್ರತಿಯೊಂದು ಲೇಖನ, ಅಭಿಪ್ರಾಯ ಮತ್ತು ಮಾಹಿತಿಯ ಸಂಪೂರ್ಣ ಜವಾಬ್ದಾರಿ ಸಂಬಂಧಿತ ಲೇಖಕರದ್ದೇ ಆಗಿರುತ್ತದೆ. “ವನ್ಯ” ಸಂಪಾದಕ ಮಂಡಳಿ ಹಾಗೂ ಅಘನಾಶಿನಿ ನೇಚರ್ ಫೌಂಡೇಶನ್ ಲೇಖನಗಳ ವಿಷಯ, ಆಲೋಚನೆಗಳು ಅಥವಾ ಅಭಿಪ್ರಾಯಗಳಿಗೆ ಯಾವುದೇ ರೀತಿಯ ಹೊಣೆಗಾರರಾಗಿರುವುದಿಲ್ಲ.

ನಿಮ್ಮ ಲೇಖನಗಳನ್ನು ನಿರೀಕ್ಷಿಸುತ್ತೇವೆ.

ಅಘನಾಶಿನಿ ನೇಚರ್ ಫೌಂಡೇಶನ್
ಜ್ಞಾನದ ಹರಿವು

